# ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ

ವನವಿಕಾಸ, ನೆಲಮಹಡಿ, 18ನೇ ಕ್ರಾಸ್ ಮಲ್ಲೇಶ್ವರಂ,

ಬೆಂಗಳೂರು-560003

ದೂ: 080-23566126

**Email: iaftbangalore@gmail.com**

**www.iaft.co.in**

## 2024-25 ರ ವಾರ್ಷಿಕ ಸರ್ವ ಸದಸ್ಯರ ಸಭೆ

**ದಿನಾಂಕ: 18-10-2025, ಶನಿವಾರ**

**ಸ್ಥಳ:**

**ಅಲ್ಯೂಮ್ನಿ ಅಸೋಸಿಯೇಷನ್ ಸಭಾಂಗಣ,**

**ಯು.ಎ.ಎಸ್. ಬೆಂಗಳೂರು**

**ಪಶುವೈದ್ಯಕೀಯ ಕಾಲೇಜು ಆವರಣ,**

**ಹೆಬ್ಬಾಳ, ಬೆಂಗಳೂರು-560024**

# ಕಾರ್ಯಕಾರಿ ಸಮಿತಿ (2024-25)

**ಅಧ್ಯಕ್ಷರು:**
ಶ್ರೀ ಅಜಯ್ ಮಿಶ್ರ (ದಿ:28–09–2024 ರವರೆಗೆ)
ಶ್ರೀ ಎನ್.ಡಿ. ತಿವಾರಿ (ದಿ: 28–09–2024 ರಿಂದ)

**ಸಹ ಅಧ್ಯಕ್ಷರು:**
ಡಾ. ಎಸ್.ಸಿ.ವಿ. ರೆಡ್ಡಿ (ದಿ: 28–09–2024 ರಿಂದ)

**ಉಪಾಧ್ಯಕ್ಷರು:**
ಡಾ. ಎಸ್. ರಾಜೇಂದ್ರ ಪ್ರಸಾದ್ (ದಿ: 28–09–2024 ರಿಂದ)

**ಕಾರ್ಯದರ್ಶಿ:**
ಶ್ರೀ ಹೆಚ್.ಜಿ. ಶಿವಾನಂದಮೂರ್ತಿ (ದಿ:28–09–2024 ರವರೆಗೆ)
ಡಾ. ಎಸ್. ರಮೇಶ್ (ದಿ: 28–09–2024 ರಿಂದ)

**ಜಂಟಿ ಕಾರ್ಯದರ್ಶಿ:**
ಶ್ರೀ ಎ. ಅಶ್ವಥಯ್ಯ (ದಿ:28–09–2024 ರವರೆಗೆ)
ಶ್ರೀ ಎನ್. ಶಿವರಾಜು (ದಿ: 28–09–2024 ರಿಂದ)

**ಖಜಾಂಚಿ:**
ಶ್ರೀ ಗುರುಮೂರ್ತಿ (ದಿ:28–09–2024 ರವರೆಗೆ)
ಶ್ರೀ ಎ. ಅಶ್ವಥಯ್ಯ (ದಿ: 28–09–2024 ರಿಂದ)

**ಸದಸ್ಯರುಗಳು:** (ದಿ:28–09–2024 ರವರೆಗೆ)
ಡಾ. ಎ.ಬಿ. ಪಾಟೀಲ್
ಶ್ರೀ ಪ್ರತಾಪ್ ಹೆಗಡೆ
ಶ್ರೀ ಸಿದ್ದಲಿಂಗಪ್ಪ
ಶ್ರೀ ಎನ್. ಶಿವರಾಜು
ಶ್ರೀ ಬಿ.ಪಿ. ಹನುಮಂತರಾಯಪ್ಪ
ಶ್ರೀ ಆರ್. ಆಂಜನೇಯ ರೆಡ್ಡಿ
ಶ್ರೀ ಮಲ್ಲೇಶ್ ಲಿಂಗಾಚಾರ್

**ಸದಸ್ಯರುಗಳು:** (ದಿ:28–09–2024 ರಿಂದ)
ಡಾ. ಜಿ.ಕೆ. ವಸಂತ್ ಕುಮಾರ್
ಡಾ. ಎ.ಬಿ. ಪಾಟೀಲ್
ಡಾ. ಅನಿತಾ ಸದಾಶಿವಯ್ಯ
ಶ್ರೀ ಎ.ಸಿ. ಕೇಶವಮೂರ್ತಿ
ಶ್ರೀ ಸಿದ್ದೇಗೌಡ
ಶ್ರೀ ಹೆಚ್.ಪಿ. ಮೋಹನ್
ಶ್ರೀ ಶ್ರೀನಿವಾಸ್ ಪಟೇಲ್

**ಸಹ ಸದಸ್ಯರು:** (ದಿ:28–09–2024 ರಿಂದ)
ಡಾ. ಚಂದ್ರಶೇಖರ್ ಬಿರಾದಾರ್
ಶ್ರೀ ಪ್ರತಾಪ್ ಹೆಗಡೆ
ಡಾ. ಟಿ.ಆರ್. ಗುರುಪ್ರಸಾದ್
ಶ್ರೀ ಜಿ.ಯು. ಶಂಕರ್

**ನಾಮ ನಿರ್ದೇಶನ ಸದಸ್ಯರು:** (ದಿ:28–09–2024 ರವರೆಗೆ)
ಶ್ರೀ ಎ.ಎಂ. ಅಣ್ಣಯ್ಯ
ಶ್ರೀ ಕೆ.ಎಸ್. ಆನಂದ್

**ನಾಮ ನಿರ್ದೇಶನ ಸದಸ್ಯರು:** (ದಿ:28–09–2024 ರಿಂದ)
ಡಾ. ಎಂ. ಮಹದೇವಮೂರ್ತಿ
ಶ್ರೀ ಆರ್. ಆಂಜನೇಯ ರೆಡ್ಡಿ

**ಲೆಕ್ಕ ಪರಿಶೋಧಕರು**
ಮೆ॥ ಜಿ. ಮುರಳಿ ಮತ್ತು ಕಂ. ಲೆಕ್ಕ ಪರಿಶೋಧಕರು
#412, 4ನೇ ಮಹಡಿ, ವನವಿಕಾಸ, 18ನೇ ತಿರುವು,
ಮಲ್ಲೇಶ್ವರಂ, ಬೆಂಗಳೂರು – 560003
ದೂ: 080 – 23463630

**ಬ್ಯಾಂಕರ್ಸ್:**
ಕೆನರಾ ಬ್ಯಾಂಕ್, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

# ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ರಿ)

ವನವಿಕಾಸ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

ದೂ: 080-23566126, E-mail: iaftbangalore@gmail.com ವೆಬ್:www.iaft.co.in

| | | |
|---|---|---|
| ಎನ್.ಡಿ. ತಿವಾರಿ, ಭಾ.ಅ.ಸೇ.(ನಿ)<br>ಅಧ್ಯಕ್ಷರು<br>ದೂ.: 9448360161 | ಡಾ. ಎಸ್.ಸಿ.ವಿ. ರೆಡ್ಡಿ, ನಿರ್ದೇಶಕರು(ನಿ) ಕೆ.ಎಸ್.ಎಸ್.ಸಿ.ಎ.<br>ಸಹ ಅಧ್ಯಕ್ಷರು<br>ದೂ.: 9880646274 | ಡಾ. ಎಸ್.ರಾಜೇಂದ್ರ ಪ್ರಸಾದ್, ಕುಲಪತಿಗಳು (ನಿ) ಯುಎಎಸ್(ಬಿ)<br>ಉಪಾಧ್ಯಕ್ಷರು<br>ದೂ.: 9452883308 |
| ಡಾ. ಎಸ್. ರಮೇಶ್, ಭಾ.ಅ.ಸೇ.(ನಿ)<br>ಕಾರ್ಯದರ್ಶಿ<br>ದೂ.: 9448076969 | ಎನ್. ಶಿವರಾಜು, ಉ.ಅ.ಸಂ.(ನಿ)<br>ಜಂಟಿ ಕಾರ್ಯದರ್ಶಿ<br>ದೂ.: 9482647448 | ಎ.ಅಶ್ವಥಯ್ಯ, ಉ.ಅ.ಸಂ.(ನಿ)<br>ಖಜಾಂಚಿ<br>ದೂ.: 9448185009 |


ಪತ್ರ ಸಂಖ್ಯೆ: ಕೃರೈತಂ/40/2025-26

ದಿನಾಂಕ: 24-09-2025

## ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನಾಪತ್ರ

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರಿನ 2024-25ನೇ ಸಾಲಿನ 12ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ದಿನಾಂಕ: 18-10-2025ರ ಶನಿವಾರ ಬೆಳಿಗ್ಗೆ 11.45 ಗಂಟೆಗೆ ಅಲ್ಯೂಮ್ನಿ ಅಸೋಸಿಯೇಷನ್ ಸಭಾಂಗಣ, ಪಶುವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಂಗಳೂರು ಇಲ್ಲಿ ನಡೆಸಲಾಗುವುದು. ಸದಸ್ಯರು ಭಾಗವಹಿಸಲು ಕೋರಲಾಗಿದೆ.

ಶ್ರೀ ಎನ್.ಡಿ. ತಿವಾರಿ, ಅಧ್ಯಕ್ಷರು ಸಭೆಯ ಅಧ್ಯಕ್ಷತೆಯನ್ನು ವಹಿಸುವರು.

### ಕಾರ್ಯಸೂಚಿ:

1. ಪ್ರಾರ್ಥನೆ
2. ಸ್ವಾಗತ
3. 2024-25ನೇ ಸಾಲಿನಲ್ಲಿ ದಿವಂಗತರಾದ ಸದಸ್ಯರಿಗೆ ಶ್ರದ್ಧಾಂಜಲಿ
4. 2024-25ನೇ ಸಾಲಿನ 12 ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದುವುದು
5. 2023-24ನೇ ಸಾಲಿಗೆ ದಿ: 28-09-2024 ರಂದು ನಡೆದ ಸಂಸ್ಥೆಯ 11ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿ ಮತ್ತು ಅನುಪಾಲನಾ ವರದಿ ಮಂಡನೆ
6. 2024-25ನೇ ಸಾಲಿನ ಸಂಸ್ಥೆಯ ವಾರ್ಷಿಕ ವರದಿಯ ಪರಿಶೀಲನೆ ಮತ್ತು ಅನುಮೋದನೆ
7. 2024-25ನೇ ಸಾಲಿನ ಲೆಕ್ಕಪತ್ರಗಳು ಹಾಗೂ ಲೆಕ್ಕ ಪರಿಶೋಧಕರ ವರದಿಯ ಮಂಡನೆ ಹಾಗೂ ಅನುಮೋದನೆ
8. 2025-26ನೇ ಸಾಲಿನ ಲೆಕ್ಕಪತ್ರ ಪರಿಶೀಲನೆಗೆ ಲೆಕ್ಕಪರಿಶೋಧಕರ ನೇಮಕ
9. 2026-27ನೇ ಸಾಲಿನ ಆಯವ್ಯಯ ಅಂದಾಜಿನ ಮಂಡನೆ ಮತ್ತು ಅನುಮೋದನೆ
10. ಕಾರ್ಯದರ್ಶಿಯವರಿಂದ ಸ್ವೀಕರಿಸಲ್ಪಟ್ಟಿರುವ ಲಿಖಿತ ಸಲಹೆಗಳಿದ್ದಲ್ಲಿ ಅವುಗಳ ಪರಿಶೀಲನೆ
    (ಸೂಚನೆ: ಮಾನ್ಯ ಸದಸ್ಯರು ವಾರ್ಷಿಕ ಸರ್ವ ಸದಸ್ಯರ ಸಭೆಗೆ ಏಳು ದಿನಗಳು ಮುಂಚಿತವಾಗಿ ತಲುಪುವಂತೆ ಚರ್ಚಿಸಬೇಕಾದ ವಿಷಯಗಳಿದ್ದಲ್ಲಿ ಕಾರ್ಯದರ್ಶಿಯವರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ)
11. ಅಧ್ಯಕ್ಷರ ಭಾಷಣ
12. ವಂದನಾರ್ಪಣೆ

ಡಾ. ಎಸ್. ರಮೇಶ್
ಕಾರ್ಯದರ್ಶಿಗಳು

**ಸೂಚನೆ:**

1) ವಾರ್ಷಿಕ ಸರ್ವ ಸದಸ್ಯರ ಸಭೆಯ ವಿವರಗಳ ಕಿರುಪುಸ್ತಕ ಸಂಸ್ಥೆಯ ಜಾಲತಾಣ www.iaft.co.in ಇಮೇಲ್ ಹಾಗೂ ವಾಟ್ಸಾಪ್ ಗುಂಪಿನಲ್ಲಿ ಪ್ರಕಟಿಸಲಾಗಿದೆ ಹಾಗೂ ಕಛೇರಿ ಕೆಲಸದ ದಿನಗಳಂದು ಬೆಳಿಗ್ಗೆ 11.00 ರಿಂದ 04.00 ರವರೆಗೆ ಸದಸ್ಯರು ಪಡೆದುಕೊಳ್ಳಬಹುದು.
2) ಅಲ್ಯೂಮ್ನಿ ಅಸೋಸಿಯೇಷನ್ ಸಭಾಂಗಣದ ಎದುರಿನ ಉದ್ಯಾನದಲ್ಲಿ ಮಧ್ಯಾಹ್ನದ ಊಟಕ್ಕೆ ಎಲ್ಲಾ ಸದಸ್ಯರನ್ನು ಆತ್ಮೀಯವಾಗಿ ಆಹ್ವಾನಿಸಿದೆ.

**ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರು**

**ದಿನಾಂಕ: 28–09–2024 ರಂದು ಅಲ್ಯೂಮ್ನಿ ಅಸೋಸಿಯೇಷನ್ ಸಭಾಂಗಣ (UAS-B), ಪಶು ವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಂಗಳೂರು ಇಲ್ಲಿ ನಡೆದ 2023–24ನೇ ಸಾಲಿನ ಹನ್ನೊಂದನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿಗಳು.**

**ಹಾಜರಿದ್ದ ಸದಸ್ಯರ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.**

ದಿ:28–09–2024 ರಂದು ಬೆಳಿಗ್ಗೆ 11.00 ಘಂಟೆಗೆ ವಾರ್ಷಿಕ ಸರ್ವಸದಸ್ಯರ ಸಭೆಗೆ ಕರೆ ನೀಡಲಾಯಿತು. ಸಭೆಗೆ ಕೋರಂ ಇಲ್ಲದಿದ್ದರಿಂದ ಅಧ್ಯಕ್ಷರು ಸಭೆಯನ್ನು ನಿಯಮಾನುಸಾರ ಮುಂದೂಡಿ, ನಂತರ ಸಭೆಯನ್ನು ಮುಂದುವರೆಸಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ. ಅಜಯ್ ಮಿಶ್ರ ರವರು ವಹಿಸಿದ್ದರು.

ಅಧಿಕೃತ ಸಭೆಯನ್ನು ಪ್ರಾರಂಭಿಸುವ ಪೂರ್ವದಲ್ಲಿ ಸಂಸ್ಥೆಯ ಅಜೀವ ಸದಸ್ಯರಾದ ಡಾ. ಎಂ.ಸಿ. ರಂಗಸ್ವಾಮಿ, ದೊಡ್ಡಮಗ್ಗೆ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ರವರಿಗೆ ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರುರವರು ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿರುವುದಕ್ಕೆ ಸಂಸ್ಥೆಯ ಪರವಾಗಿ ಅಭಿನಂದಿಸಲಾಯಿತು. ಇವರು ಕಲಾ ಪದವೀಧರರಾಗಿದ್ದರೂ ಸಹ ಕೃಷಿಯನ್ನು ವೃತ್ತಿ ಹಾಗೂ ಪ್ರವೃತ್ತಿಯಾಗಿ ಕೈಗೊಂಡು ಯಶಸ್ವಿಯಾಗಿ ಕೃಷಿ, ಅರಣ್ಯ, ತೋಟಗಾರಿಕೆ ಮುಂತಾದ ಬೆಳೆಗಳನ್ನು ಬೆಳೆದಿದ್ದು, ಹಲವಾರು ಜನರಿಗೆ ಉದ್ಯೋಗವವನ್ನೂ ಸಹ ನೀಡಿರುತ್ತಾರೆ. ಅಲ್ಲದೆ ಅತ್ಯುತ್ತಮ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಮಾದರಿಯಾಗಿರುತ್ತಾರೆ. ಇವರ ಸಾಧನೆಗೆ ಸಂದ ಪ್ರಶಸ್ತಿಗಳು ಹಲವಾರು. ಇವರನ್ನು ಕೃಷಿ ವಿಶ್ವ ವಿದ್ಯಾನಿಲಯದ ಘಟಿಕೋತ್ಸವದಲ್ಲಿ ಕೃಷಿ ವಿಭಾಗದ ಸಾಧನೆಗಾಗಿ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿರುವುದು ಸಂಸ್ಥೆಗೆ ಹೆಮ್ಮೆಯ ವಿಷಯವಾಗಿರುತ್ತದೆ.

ಸಂಸ್ಥೆಯ 'ಕೃಷಿವನ' ತ್ರೈಮಾಸಿಕ ವಾರ್ತಾಪತ್ರ ಜುಲೈ–ಸೆಪ್ಟೆಂಬರ್ 2024ನ್ನು ಬಿಡುಗಡೆ ಮಾಡಲಾಯಿತು.

ಸಂಸ್ಥೆಯ ವತಿಯಿಂದ ಕೃಷಿಅರಣ್ಯದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದವರಿಗೆ ಕೃಷಿಅರಣ್ಯ ತಜ್ಞ ಟಿ.ಹೆಚ್. ಮಲ್ಲಿಕಾರ್ಜುನ ರಾಜ್ಯ ಪ್ರಶಸ್ತಿಯನ್ನು ನಡೆದ ಸಮಾರಂಭದಲ್ಲಿ ಪ್ರಗತಿಪರ ರೈತರಾದ ಶ್ರೀ ಸಂದೀಪ್ ವಿರೂಪಾಕ್ಷಪ್ಪ ಬೆಲ್ಲದ್, ಕಟಕನಾಳ, ಬೈಲಹೊಂಗಲ ತಾಲ್ಲೂಕು, ಬೆಳಗಾವಿ, ಮುಂಚೂಣಿ ಅರಣ್ಯ ಸಿಬ್ಬಂದಿಗಳಾದ ಶ್ರೀಮತಿ ಪುಷ್ಪ ಎಂ, ವಲಯ ಅರಣ್ಯಾಧಿಕಾರಿಗಳು, ಹಾಗೂ ಶ್ರೀಮತಿ ಮೇಘಾ ಎನ್. ಪಾಟೀಲ, ಉಪವಲಯ ಅರಣ್ಯಾಧಿಕಾರಿಗಳು, ಸಂಸ್ಥೆಗಳಾದ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಗಡಿಗವಾರಹಳ್ಳಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಯುವಶಕ್ತಿ (ರಿ), ಚಿಕ್ಕಬಳ್ಳಾಪುರ, ಟೆಲೆಇಂಡಿಯಾ ನೆಟ್ ವರ್ಕ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರನ್ನು ಗೌರವಿಸಲಾಯಿತು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಎಸ್.ಜಿ. ಸುಶೀಲಮ್ಮ, ಅಧ್ಯಕ್ಷರು, ಸುಮಂಗಲಿ ಸೇವಾಶ್ರಮ, ಬೆಂಗಳೂರು, ಡಾ. ಕೆ. ನಾರಾಯಣಗೌಡ, ವಿಶ್ರಾಂತ ಕುಲಪತಿಗಳು, ಕೃಷಿವಿಶ್ವವಿದ್ಯಾನಿಲಯ, ಬೆಂಗಳೂರು, ಡಾ. ಎನ್.ಸಿ. ಪಟೇಲ್, ಪ್ರಗತಿಪರ ರೈತರು, ನಾಗದಾಸನಹಳ್ಳಿ, ಬೆಂಗಳೂರು, ಶ್ರೀ ಬಿ.ಎಸ್. ರಘುನಾಥ್, ಪ್ರಗತಿಪರ ರೈತರು ಹಾಗೂ ವಿಶ್ರಾಂತ ಕಾರ್ಯಕಾರಿ ಸಮಿತಿ ಸದಸ್ಯರು, ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಹಾಗೂ ಡಾ. ಎಸ್.ವಿ. ಸುರೇಶ, ಕುಲಪತಿಗಳು, ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರುರವರು ಉಪಸ್ಥಿತರಿದ್ದರು. ಶ್ರೀ ಅಜಯ್ ಮಿಶ್ರ, ಭಾ.ಅ.ಸೇ (ನಿ), ಅಧ್ಯಕ್ಷರು, ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರು ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಸದಸ್ಯರು, ಆಹ್ವಾನಿತರು, ಸಮಾರಂಭದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.

**ವಿಷಯ–1: ಪ್ರಾರ್ಥನೆ**

ಸದಸ್ಯರಾದ ಶ್ರೀ ಎಸ್. ಚಂದ್ರಶೇಖರ್ ಆಚಾರ್ ರವರ ಪ್ರಾರ್ಥನೆ ಹಾಗೂ ಸದಸ್ಯರಾದ ಕುಮಾರಿ ಸುಪ್ರಿಯ ಸಿ.ಎನ್. ಹಾಗೂ ಕುಮಾರಿ ಕಿರಣ್ ಕುಮಾರಿರವರ ರೈತಗೀತೆಯೊಂದಿಗೆ ಸರ್ವಸದಸ್ಯರ ಸಭೆಯನ್ನು ಪ್ರಾರಂಭಿಸಲಾಯಿತು. ದೀಪ ಬೆಳಗಿಸುವುದರ ಮೂಲಕ ಸರ್ವಸದಸ್ಯರ ಸಭೆಗೆ ಚಾಲನೆ ನೀಡಲಾಯಿತು.

**ವಿಷಯ–2: ಸ್ವಾಗತ**

ಕಾರ್ಯದರ್ಶಿಗಳಾದ ಶ್ರೀ ಹೆಚ್.ಜಿ. ಶಿವಾನಂದಮೂರ್ತಿಯವರು ದಿ:28–09–2024 ರಂದು ನಡೆದ ಸಭೆಗೆ ಕೋರಂ ಇರುವುದರಿಂದ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಅಜಯ್ ಮಿಶ್ರ ರವರಿಗೆ ಸಭೆಯ ಅಧ್ಯಕ್ಷತೆ ವಹಿಸಿ, ಸಭೆಯನ್ನು ನಡೆಸಿಕೊಡಲು ಕೋರಿದರು.

ಕಾರ್ಯದರ್ಶಿಯವರು ಸಂಸ್ಥೆಯ ಪದಾಧಿಕಾರಿಗಳನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು.

**ವಿಷಯ–3: 2023–24ನೇ ಸಾಲಿನಲ್ಲಿ ದಿವಂಗತರಾದ ಸದಸ್ಯರಿಗೆ ಶ್ರದ್ಧಾಂಜಲಿ**

2023–24ನೇ ಸಾಲಿನಲ್ಲಿ ದಿವಂಗತರಾದ ಸದಸ್ಯರಾದ ಕುಮಾರಸ್ವಾಮಿ ಎಸ್, ಬಿ. ವೆಂಕಟಸ್ವಾಮಿ, ಯು.ಟಿ. ಆಳ್ವ, ವೆಂಕಟೇಶ್ ಇವರುಗಳಿಗೆ ಹಾಗೂ ಇತ್ತೀಚೆಗೆ ನಿಧನರಾದ ಡಾ. ಬಿ.ಆರ್. ಭಾಸ್ಕರ್ ರವರಿಗೆ ಎರಡು ನಿಮಿಷ ಮೌನ ಆಚರಿಸುವ ಮೂಲಕ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

**ವಿಷಯ–4: 2023–24ನೇ ಸಾಲಿನ 11ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದುವುದು**

ದಿ:28–09–2024 ರಂದು ನಡೆಸಲಾದ 2023–24ನೇ ಸಾಲಿನ ಹನ್ನೊಂದನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರವನು ಕಾರ್ಯದರ್ಶಿಯವರು ಓದಿ ದಾಖಲಿಸಲಾಯಿತು. ಮತ್ತು ಅಧ್ಯಕ್ಷರ ಸೂಚನೆಯ ಮೇರೆಗೆ ವಿಷಯ ಸೂಚಿ ಪ್ರಕಾರ, ವಿಷಯಗಳನ್ನು ಚರ್ಚೆಗೆ ಒಳಪಡಿಸಲಾಯಿತು.

**ವಿಷಯ–5: 2022–23ನೇ ಸಾಲಿಗೆ ದಿ:30–09–2023 ರಂದು ನಡೆದ ಸಂಸ್ಥೆಯ 10ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿ ಮತ್ತು ಅನುಪಾಲನ ವರದಿ ಮಂಡನೆ**

ಸಂಸ್ಥೆಯ ದಿ:30–09–2022 ರಂದು ನಡೆದ 10ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿಗಳು ಮತ್ತು ಅನುಪಾಲನ ವರದಿ ಹಾಗೂ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳನ್ನು ಕಾರ್ಯದರ್ಶಿಗಳು ಸಭೆಯಲ್ಲಿ ಮಂಡಿಸಿದರು. ವಿಷಯಗಳ ಬಗ್ಗೆ ಯಾವುದೇ ಸಲಹೆ/ತಿದ್ದುಪಡಿ ಬಾರದೆ ಇದ್ದ ಕಾರಣ, ಶ್ರೀ ಎಸ್. ನಾರಾಯಣಸ್ವಾಮಿರವರು ಸೂಚಿಸಿದ ಅಂಗೀಕಾರಕ್ಕೆ ಸದಸ್ಯರಾದ ಡಾ. ಜಿ. ಈಶ್ವರಪ್ಪರವರು ಅನುಮೋದನೆ ಸೂಚಿಸಿದರು ಹಾಗೂ ಹಾಜರಿದ್ದ ಸದಸ್ಯರು ಸರ್ವಾನುಮತದಿಂದ ಅಂಗೀಕಾರವನ್ನು ನೀಡಿದರು.

**ವಿಷಯ–6: 2023–24ನೇ ಸಾಲಿನ ಸಂಸ್ಥೆಯ ವಾರ್ಷಿಕ ವರದಿಯ ಪರಿಶೀಲನೆ ಮತ್ತು ಅನುಮೋದನೆ**

ಸಂಸ್ಥೆಯ 2023–24ನೇ ಸಾಲಿನ ವಾರ್ಷಿಕ ವರದಿಯನ್ನು ಕಾರ್ಯದರ್ಶಿಗಳು ಸಭೆಯ ಚರ್ಚೆಗೆ ಮಂಡಿಸಿದರು. ಈ ವಿಷಯಸೂಚಿಗೆ ಶ್ರೀ ಸಿದ್ದೇಗೌಡ ರವರು ಅಂಗೀಕಾರ ಸೂಚಿಸಿದರು ಹಾಗೂ ಶ್ರೀ ಎ.ಎಸ್. ಗಂಗಾಧರಪ್ಪ ರವರು ಅನುಮೋದಿಸಿದರು.

**ವಿಷಯ–7: 2023–24ನೇ ಸಾಲಿನ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧಕರ ವರದಿಯ ಮಂಡನೆ ಹಾಗೂ ಅನುಮೋದನೆ**

ಗುರುಮೂರ್ತಿಯವರು ಸಭೆಯಲ್ಲಿ ಮಂಡಿಸಿದರು. ಈ ವಿಷಯಸೂಚಿಗೆ ಡಾ. ಎಸ್.ಜಿ. ಸುಶೀಲಮ್ಮ ರವರು ಅಂಗೀಕಾರ ಸೂಚಿಸಿದರು ಹಾಗೂ ಶ್ರೀ ಎ.ಸಿ. ಕೇಶವಮೂರ್ತಿರವರು ಅನುಮೋದಿಸಿದರು.

**ವಿಷಯ-8: 2024-25ನೇ ಸಾಲಿನ ಲೆಕ್ಕಪತ್ರಗಳ ಪರಿಶೀಲನೆಗೆ ಲೆಕ್ಕಪರಿಶೋಧಕರ ನೇಮಕ**

2024-25ನೇ ಸಾಲಿಗೆ ಲೆಕ್ಕಪತ್ರಗಳ ಪರಿಶೀಲನೆಗೆ 2023-24ನೇ ಸಾಲಿಗೆ ಲೆಕ್ಕಪರಿಶೋಧನೆ ಮಾಡಿದ ಮೆ. ಮುರಳಿ ಅಂಡ್ ಕಂಪನಿ, ಮಲ್ಲೇಶ್ವರಂ, ಬೆಂಗಳೂರು ಇವರನ್ನು 2024-25ನೇ ಸಾಲಿಗೆ ಮುಂದುವರೆಸುವಂತೆ ತೀರ್ಮಾನಿಸಲಾಯಿತು ಹಾಗೂ ಸಂಭಾವನೆಯ ಮೊತ್ತವನ್ನು ನಿರ್ಧರಿಸುವ ವಿವೇಚನೆಯನ್ನು ಕಾರ್ಯಕಾರಿ ಸಮಿತಿ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. ಡಾ ಅನಿತಾ ಸದಾಶಿವಯ್ಯರವರು ಸೂಚಿಸಿದ ಅಂಗೀಕಾರಕ್ಕೆ ಸದಸ್ಯರಾದ ಡಾ. ಎನ್.ಸಿ. ಪಟೇಲ್ ರವರು ಅನುಮೋದಿಸಿದರು.

**ವಿಷಯ-9: 2025-26ನೇ ಸಾಲಿನ ಆಯವ್ಯಯ ಅಂದಾಜಿನ ಮಂಡನೆ ಮತ್ತು ಅನುಮೋದನೆ**

2025-26ನೇ ಸಾಲಿಗೆ ಪ್ರಸ್ತಾಪಿತ ಆಯವ್ಯಯ ತಃಖ್ತೆಯನ್ನು ಖಜಾಂಚಿಗಳಾದ ಶ್ರಿ ಗುರುಮೂರ್ತಿ ರವರು ಸಭೆಯಲ್ಲಿ ಮಂಡಿಸಿದರು. ಪ್ರಸ್ತಾಪಿತ ಆಯವ್ಯಯವನ್ನು ಪರಿಶೀಲಿಸಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ-10: ಕಾರ್ಯದರ್ಶಿಯವರಿಂದ ಸ್ವೀಕರಿಸಲ್ಪಟ್ಟಿರುವ ಲಿಖಿತ ಸಲಹಗಳಿದ್ದಲ್ಲಿ ಅವುಗಳ ಪರಿಶೀಲನೆ**

ಕಾರ್ಯದರ್ಶಿಯವರು ಸಭೆಗೆ 3 ಪತ್ರಗಳು ಬಂದಿರುವುದಾಗಿ ತಿಳಿಸಿದರು.

ಶ್ರೀ ಕೆ. ಅಮರನಾರಾಯಣ ಇವರು ಸಂಸ್ಥೆಯು ಕೃಷಿಅರಣ್ಯದ ಬಗ್ಗೆ ಮಾಡಬೇಕಾದ ವಿಚಾರಗಳನ್ನು ಹತ್ತು ನಿಮಿಷಗಳ ಕಾಲ ಮಾತನಾಡಲು ಇಚ್ಛಿಸಿರುತ್ತೇನೆ. ಸಭಾ ಸೂಚನಾ ಪತ್ರದಲ್ಲಿ ತಿಳಿಸಿರುವಂತೆ ಒಂದು ವಾರ ಮುಂಚಿತವಾಗಿ ಮಾಹಿತಿ ನೀಡುತ್ತಿದ್ದೇನೆ. ಸೂಕ್ತ ಏರ್ಪಾಡುಗಳನ್ನು ಮಾಡಲು ವಿನಂತಿಸಿದೆ ಎಂದು ಪತ್ರ ಬರೆದಿರುವುದಾಗಿ ಕಾರ್ಯದರ್ಶಿಯವರು ಸಭೆಗೆ ಓದಿ ತಿಳಿಸಿದರು. ಕೃಷಿಅರಣ್ಯ ಬೆಳೆಯುವ ರೈತರಿಗೆ ಸರಿಯಾದ ಮಾಹಿತಿಯ ಅವಶ್ಯಕತೆಯಿದೆ ಹಾಗೂ ರೈತರಿಗೆ ಉಪಯೋಗವಾಗುವಂತೆ ಕೃಷಿಅರಣ್ಯದ ನೀತಿಗಳನ್ನು ಸರಳೀಕರಣಗೊಳಿಸಲು ಅನುಕೂಲವಾಗಲು ಕ್ರಮಗಳನ್ನು ತೆಗೆದುಕೊಳ್ಳುವಂತೆ ಕೋರಿದರು.

ಸದಸ್ಯರಾದ ಶ್ರೀ ಹೆಚ್. ಸತೀಶ್ ಕುಮಾರ್ ರವರು ಸಂಸ್ಥೆಯ ವಾಟ್ಸಾಪ್ ಗುಂಪಿನಲ್ಲಿ ರೈತರಿಗೂ ಮಾಹಿತಿಯನ್ನು ಹಂಚಿಕೊಳ್ಳಲು ಅವಕಾಶ ಕಲ್ಪಿಸಲು ಕೋರಿದರು.

ಸದಸ್ಯರಾದ ಶ್ರೀ ಎ.ಎಂ. ಅಣ್ಣಯ್ಯರವರು ಸಂಸ್ಥೆಯ ಬೈಲಾದಲ್ಲಿ ಕೆಲವೊಂದು ಅಗತ್ಯ ತಿದ್ದುಪಡಿಗಳನ್ನು ತರಬೇಕಾಗಿದ್ದು, ಅವುಗಳ ಕುರಿತಂತೆ ತಮ್ಮ ಸಲಹೆಗಳನ್ನು ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಗಮನಕ್ಕೆ ತಂದರು. ಇದಕ್ಕೆ ಸದಸ್ಯರಾದ ಶ್ರೀ ಸಿ. ಚಿಕ್ಕಣ್ಣರವರು ವಿಶೇಷ ಸರ್ವ ಸದಸ್ಯರ ಸಭೆಯನ್ನು ಕರೆದು ತಿದ್ದುಪಡಿಗಳ ಕುರಿತಂತೆ ಚರ್ಚಿಸಿ ಮುಂದುವರೆಯಲು ತಿಳಿಸಿದರು. ಇದಕ್ಕೆ ಸಹ ಅಧ್ಯಕ್ಷರಾದ ಎಸ್.ಸಿ.ವಿ. ರೆಡ್ಡಿಯವರು ವಿಶೇಷ ಸರ್ವ ಸದಸ್ಯರ ಸಭೆ ಕರೆದು ತಿದ್ದುಪಡಿಗಳನ್ನು ಚರ್ಚಿಸಲಾಗುವುದೆಂದು ತಿಳಿಸಿದರು.

**ವಿಷಯ-11: ಅಧ್ಯಕ್ಷರ ಭಾಷಣ**

ಸಂಸ್ಥೆಯ ಅಧ್ಯಕ್ಷರಾದ ಶ್ರೀ ಅಜಯ್ ಮಿಶ್ರರವರು ಅಧ್ಯಕ್ಷರ ನುಡಿಗಳನ್ನಾಡುತ್ತಾ ಸಂಸ್ಥೆಯು ಕೃಷಿಅರಣ್ಯ ಪ್ರೋತ್ಸಾಹಿಸಲು ತೆಗೆದುಕೊಂಡಿರುವ ಹಲವಾರು ಕ್ರಮಗಳನ್ನು ಕುರಿತು ಮಾತನಾಡಿದರು. ಕೃಷಿಅರಣ್ಯವೆಂಬುದು ಹಲವು ಭಾಗೀದಾರ ಇಲಾಖೆಗಳು ಹಾಗೂ ರೈತರುಗಳನ್ನೊಳಗೊಂಡ ವಿಷಯವಾಗಿದ್ದು, ಕೃಷಿ, ಅರಣ್ಯ, ಕಂದಾಯ, ರೇಷ್ಮೆ, ಹೈನುಗಾರಿಕೆ ಮುಂತಾದ ಇಲಾಖೆಗಳ ಸಮನ್ವಯದ ಮೂಲಕ ಕೃಷಿಅರಣ್ಯದ ವಿಷಯಗಳು ಸಾಗಬೇಕಿರುತ್ತದೆ. ಇದರಲ್ಲಿ ಯಾವುದೇ ವಿಷಯಗಳು ಅಂತಿಮವಾಗಲು ಸಮಯಾವಕಾಶ ಬೇಕಿರುತ್ತದೆ.

ಭಾರತದ ಅರಣ್ಯ ಸ್ಥಿತಿಗತಿ ವರದಿ (ISFR) ಪ್ರಕಾರ ಕೃಷಿಅರಣ್ಯದಿಂದಾಗಿ ದೇಶದಲ್ಲಿ ಅರಣ್ಯ ಪ್ರದೇಶ/ ಹಸಿರಿನ ಹೊದಿಕೆ ಹೆಚ್ಚಳವಾಗಿರುತ್ತದೆ. ಆದರೆ ಶೇ.33 ರಷ್ಟು ಅರಣ್ಯ ಪ್ರದೇಶವಿದ್ದರೆ ಮಾತ್ರ ಭೂಮಿ ಸುಸ್ಥಿರವಾಗಿರಲು ಸಾಧ್ಯ. ಈ ದಾರಿಯನ್ನು ಕ್ರಮಿಸಲು ಇನ್ನೂ ಹೆಚ್ಚು ಶ್ರಮಿಸಬೇಕಿರುತ್ತದೆ ಎನ್ನುವ ವಿಷಯವನ್ನು ಸಭೆಯ ಗಮನಕ್ಕೆ ವಿವರವಾಗಿ ತಿಳಿಸಿದರು.

ಕರ್ನಾಟಕ ರಾಜ್ಯದಲ್ಲಿ ಶ್ರೀಗಂಧದ ನೀತಿ 2022ನ್ನು ಜಾರಿಗೆ ತರಲಾಗಿದೆ. ಈ ನೀತಿಯಲ್ಲಿ ಶ್ರೀಗಂಧದ ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಈಗಾಗಲೇ ರಾಜ್ಯ ಮಟ್ಟದ ಸಮಿತಿ ರಚನೆಯಾಗಿದೆ. ಅದರ ಮೇಲ್ವಿಚಾರಣಾ

ಸಭೆಯಲ್ಲಿ ಹಲವಾರು ವಿಷಯಗಳ ಬಗ್ಗೆ ಚರ್ಚಿಸಿ ಮುಂದುವರೆಯಲಿದೆ. ಶ್ರೀಗಂಧ ನೀತಿಗೆ ಸಂಬಂಧಿಸಿದಂತೆ ಆಗಿರುವ ತಿದ್ದುಪಡಿಗಳು ಮುಂದಿನ ದಿನಗಳಲ್ಲಿ ಶ್ರೀಗಂಧ ಬೆಳೆಗಾರರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಲಿ ಎಂಬ ಆಶಯ ವ್ಯಕ್ತಪಡಿಸಿದರು. ಶ್ರೀಗಂಧದ ಮರವನ್ನು ಪೀಡಿಸುವ ಸ್ಪೈಕ್ ರೋಗಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಸಂಶೋಧನೆಗಳನ್ನು ಕೈಗೊಳ್ಳುವ ಕುರಿತಂತೆ ಶ್ರೀಗಂಧ ಮೇಲ್ವಿಚಾರಣಾ ಸಮಿತಿ ಸಭೆಯಲ್ಲಿ ಪ್ರಸ್ತಾಪಿಸಿರುವ ಕುರಿತು ಸಭೆಗೆ ಮಾಹಿತಿ ನೀಡಿದರು.

ಅಗ್ರೋ ಕ್ಲೈಮೇಟಿಕ್ ರೀಜನ್‌ಗಳಿಗೆ ಅನುಗುಣವಾಗಿ ಕೃಷಿಅರಣ್ಯದ ಮರಗಳನ್ನು ಬೆಳೆಯುವುದರ ಕುರಿತು ಮಾತನಾಡಿದರು.

ಮರಗಳ ಕಟಾವು ಮತ್ತು ಸಾಗಾಣಿಕೆಗೆ ಸಂಬಂಧಿಸಿದಂತೆ ಮಾತನಾಡುತ್ತಾ ಈಗಾಗಲೇ ಕಟಾವು ಮತ್ತು ಸಾಗಾಣಿಕೆಗೆ ಹಲವಾರು ಜಾತಿಯ ಮರಗಳಿಗೆ ವಿನಾಯಿತಿ ದೊರೆತಿದೆ. ಇನ್ನೂ ಹೆಚ್ಚಿನ ಜಾತಿಯ ಮರಗಳನ್ನು ಕಟಾವು ಮತ್ತು ಸಾಗಾಣಿಕೆಗೆ ಸಂಬಂಧಿಸಿದಂತೆ ವಿನಾಯತಿ ನೀಡಲು ಚರ್ಚೆಗಳು ನಡೆಯುತ್ತಿರುವುದಾಗಿ ತಿಳಿಸಿದರು. ಸಂಸ್ಥೆಯ ಕೃಷಿವನ ತ್ರೈಮಾಸಿಕ ವಾರ್ತಾಪತ್ರಿಕೆಯಲ್ಲಿ ಕೃಷಿಅರಣ್ಯಕ್ಕೆ ಸಂಬಂಧಿಸಿದಂತೆ ಪೂರಕವಾದ ಮಾಹಿತಿಗಳು ಲೇಖನಗಳ ರೂಪದಲ್ಲಿ ಪ್ರಕಟವಾಗುತ್ತಿದೆ ಎಂದು ತಿಳಿಸಿದರು. ಸಂಸ್ಥೆಯ ವಾಟ್ಸ್‌ಆಪ್ ಗ್ರೂಪ್‌ನಲ್ಲಿ ಇತಿಮಿತಿ ಇರುವುದರಿಂದ ವಿವರವಾದ ಮಾಹಿತಿಗಳನ್ನು ಸಂಸ್ಥೆಯ ಜಾಲತಾಣದಲ್ಲಿ ಕಾಲಕಾಲಕ್ಕೆ ನೀಡಲಾಗುತ್ತಿದೆ. ಈಗಾಗಲೇ ಸಂಸ್ಥೆಯ ವತಿಯಿಂದ 'ಕೃಷಿಅರಣ್ಯ – ರೈತರಿಗೊಂದು ಆಶಾಕಿರಣ' ಎನ್ನುವ ವಿಶೇಷ ಸಂಚಿಕೆಯನ್ನು ಹೊರತರಲಾಗಿರುತ್ತದೆ.

ಮರಗಳ ಮಾರುಕಟ್ಟೆಗೆ ಸಂಬಂಧಿಸಿದಂತೆ ಸರಿಯಾದ ಸಂಶೋಧನಾ ವಿವರಗಳನ್ನು ಒದಗಿಸಲು ಮರವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯನ್ನು ಕೋರಲಾಗಿದೆ ಎಂದು ತಿಳಿಸಿದರು.

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯು ಕೃಷಿಅರಣ್ಯ ಪ್ರೋತ್ಸಾಹಿಸಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ. ಸಂಸ್ಥೆಯೊಂದಿಗೆ ಸದಸ್ಯರು ತಮ್ಮ ಸಹಕಾರ ಮತ್ತು ಸಕಾರಾತ್ಮಕ ಸಲಹೆಗಳನ್ನು ಹಂಚಿಕೊಳ್ಳಲು ಕೋರಿದರು.

**ವಿಷಯ–12: ವಂದನಾರ್ಪಣೆ**

ಸದಸ್ಯರಾದ ಶ್ರೀ ಎ.ಬಿ. ಪಾಟೀಲ್ ರವರ ವಂದನಾರ್ಪಣೆಯೊಂದಿಗೆ 2023–24ನೇ ಸಾಲಿನ ಹನ್ನೊಂದನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಹೆಚ್.ಜಿ. ಶಿವಾನಂದಮೂರ್ತಿ)
ಕಾರ್ಯದರ್ಶಿ

(ಅಜಯ್ ಮಿಶ್ರ)
ಅಧ್ಯಕ್ಷರು

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರು

ದಿನಾಂಕ: 28–09–2024 ರಂದು ಅಲ್ಯೂಮ್ನಿ ಅಸೋಸಿಯೇಷನ್ ಸಭಾಂಗಣ, ಪಶುವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಂಗಳೂರು ಇಲ್ಲಿ ನಡೆದ 2023–24 ನೇ ಸಾಲಿನ ಹನ್ನೊಂದನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಿದ್ದ ಸದಸ್ಯರ ಪಟ್ಟಿ:

ಸರ್ವ ಶ್ರೀ/ಶ್ರೀಮತಿ

1. ಎ.ಎಂ. ಅಣ್ಣಯ್ಯ
2. ಡಾ. ಬಿ.ಎಸ್. ನಾಡಗೌಡರ್
3. ಹೆಚ್.ಜಿ. ಶಿವಾನಂದಮೂರ್ತಿ
4. ಡಾ. ಎಸ್. ರಮೇಶ್
5. ಡಾ. ಎಸ್. ರಾಜೇಂದ್ರ ಪ್ರಸಾದ್
6. ಪ್ರತಾಪ್ ಹೆಗಡೆ
7. ಡಾ. ಎಸ್.ಸಿ.ವಿ. ರೆಡ್ಡಿ
8. ಎಸ್. ಚಂದ್ರಶೇಖರ್
9. ಡಾ. ಎಸ್.ಜಿ. ಸುಶೀಲಮ್ಮ
10. ಎನ್. ಗೋಪಾಲ ಗೌಡ
11. ಶ್ರೀನಿವಾಸ್ ಜಿ. ಪಟೇಲ್
12. ದಿಲೀಪ್ ಎಸ್. ಗಾಂವಕರ್
13. ಕೆ.ಎಸ್. ಆನಂದ್
14. ಸಿದ್ಧೇಗೌಡ
15. ಗುರುಮೂರ್ತಿ
16. ಎಸ್. ಶಾಂತಪ್ಪ
17. ಬಿ.ಎಸ್. ರಘುನಾಥ್
18. ಎಂ.ಸಿ. ರಂಗಸ್ವಾಮಿ
19. ಆರ್.ಆರ್. ಯಾದವ್
20. ಎಂ.ಎಂ. ಚಿಕ್ಕಮಠ್
21. ಕೆ. ಶಿವಶಂಕರಯ್ಯ
22. ಎಸ್. ರೇವಯ್ಯ
23. ಮಾರ್ಕಂಡೇಯ
24. ಬಿ. ಹನುಮಂತಯ್ಯ
25. ಸಿ.ಕೆ. ಶಿವಣ್ಣ
26. ಕೆ.ಹೆಚ್. ನಾಗರಾಜ್
27. ಎ. ಅಶ್ವಥಯ್ಯ
28. ಕೆ. ಪ್ರೇಮಕುಮಾರ್
29. ಐ.ವಿ. ನಾಗೇಶ್
30. ಮಂಜುನಾಥ ರಾಮಕೃಷ್ಣ ಹೆಗಡೆ
31. ಶ್ರೀಧರ್ ಹೆಬ್ಬಾರ್
32. ಡಾ. ಚಿದಾನಂದ ಎನ್
33. ಡಾ. ಎಂ. ಮಹದೇವಮೂರ್ತಿ
34. ಡಾ. ಎನ್. ಕೃಷ್ಣಮೂರ್ತಿ
35. ಶಿವರಾಜು ಎನ್
36. ಎಸ್. ಮಂಜುನಾಥ ಪಟೇಲ್
37. ಎಂ.ಕೆ. ಶಂಕರಲಿಂಗೇಗೌಡ
38. ಕೆ.ಡಿ. ಉಡಪುಡಿ
39. ಪರಮಶಿವಯ್ಯ
40. ಎಸ್. ಎಸ್. ಬಿರಾದಾರ್
41. ಬಿ.ವಿ. ಕುಮಾರಯ್ಯ
42. ಟಿ.ಆರ್. ಗುರುಪ್ರಸಾದ್
43. ಮಾರಪ್ಪ ಸಿ.ವಿ.
44. ಎಂ.ಎನ್. ಪಿಳ್ಳಪ್ಪ
45. ಕೆ. ಲಿಂಗಪ್ಪ
46. ರಾಜಣ್ಣ
47. ಆರ್. ಅಂಬರೀಶ್
48. ಮುನೇಗೌಡ
49. ಎನ್.ಎಲ್. ಶಾಂತಕುಮಾರ್
50. ಪಿ. ಬಾಲಕೃಷ್ಣ
51. ರಾಜೀವ್ ಬಿ.ಎಂ.ಟಿ.
52. ರಮೇಶ್ ಬಳೂಟಗಿ
53. ಹೆಚ್.ಕೆ. ಶ್ರೀರಾಮಯ್ಯ
54. ವೀರಣ್ಣ ಕಾಮತಾರ್
55. ಗಂಗಾಧರ ಜಿ.ಎ.
56. ಡಾ. ಸಿ.ಜಿ. ಕುಶಾಲಪ್ಪ
57. ಡಾ. ಎನ್. ಬಸವರಾಜ
58. ಯು. ಶರಣಪ್ಪ

59. ಕೆ. ಅಮರನಾರಾಯಣ
60. ಸುಪ್ರಿಯ ಸಿ.ಎನ್.
61. ಸಿ. ಚಿಕ್ಕಣ್ಣ
62. ಸತೀಶ್ ಕುಮಾರ್ ಹೆಚ್
63. ಶಾಂತವೀರಯ್ಯ ಎಸ್.ಎಂ.
64. ಎನ್. ರಾಜಶೇಖರ್
65. ಟಿ. ಬಾಲಚಂದ್ರ
66. ಎಸ್. ಧನಂಜಯ
67. ಡಾ. ಟಿ.ಕೆ. ಸಿದ್ದರಾಮೇಗೌಡ
68. ಬಿ. ಶ್ರೀನಿವಾಸ ರೆಡ್ಡಿ
69. ಕೆ.ಆರ್. ಕೇಶವಮೂರ್ತಿ
70. ಕೆ. ಶಾಂತಚನ್ನೇಗೌಡ
71. ಬಾಲರಾಜು ಎಲ್
72. ಡಾ. ಎಸ್. ಹಟ್ಟಪ್ಪ
73. ಹೆಚ್.ಎ. ಪುರುಷೋತ್ತಮರಾವ್
74. ರಾಜಣ್ಣ ಆರ್
75. ಶೋಭಾ ಹೆಚ್.ಜಿ.
76. ಟಿ.ಆರ್. ಪ್ರಸನ್ನ ಕುಮಾರ್
77. ಡಾ. ಪ್ರಯಾಗ್
78. ಕೆ. ಚಿಕ್ಕಣ್ಣ
79. ಎ.ಎಸ್. ಗಂಗಾಧರಪ್ಪ
80. ಎ.ಎಸ್. ಜಗದೀಶಯ್ಯ
81. ಕೆ.ಜಿ. ಶ್ರೀಕಂಠೇಶ್ವರ
82. ನಾಗರಾಜ
83. ಕೆ. ಹರೀಶ್
84. ಎಸ್. ನಾರಾಯಣಸ್ವಾಮಿ
85. ಡಾ. ಜಿ.ಎನ್. ಧನಪಾಲ್
86. ಡಾ. ಜಿ. ಈಶ್ವರಪ್ಪ
87. ಡಾ. ಕೆ.ಹೆಚ್. ವಿನಯ್ ಕುಮಾರ್
88. ದಯಾನಂದ ಕುಮಾರ್ ಕೆ
89. ಎನ್.ಸಿ. ಪಟೇಲ್
90. ಪಿ. ಕೆಂಪೇಗೌಡ
91. ಹೆಚ್.ಪಿ. ಮೋಹನ್
92. ಡಾ. ಕೆ. ಸುಂದರ್ ನಾಯಕ್
93. ನಟರಾಜ ಸಗರನಹಳ್ಳಿ
94. ಡಾ. ಎಸ್.ವಿ. ಹಿತ್ತಲಮನಿ
95. ಆಂಜನೇಯ ರೆಡ್ಡಿ
96. ಎಲ್. ನಿತ್ಯಾನಂದ
97. ಡಾ. ನಾಗರಾಜು
98. ಡಾ. ಎನ್. ದೇವಕುಮಾರ್
99. ಡಾ. ಅನಿತಾ ಸದಾಶಿವಯ್ಯ
100. ಡಾ. ಜಿ.ಕೆ. ವಸಂತ್ ಕುಮಾರ್

**ಹನ್ನೊಂದನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳು:**

1) 2024-25ನೇ ಸಾಲಿನಲ್ಲಿ ದಿ:25-04-2024, 11-06-2024, 21-08-2024, 11-09-2024, 08-10-2024, 27-11-2024, 18-01-2025 ರಂದು ಆರು ಕಾರ್ಯಕಾರಿ ಸಮಿತಿ ಸಭೆಗಳನ್ನು ನಡೆಸಲಾಗಿದೆ. ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾಗಿದೆ. ದಿ: 12-02-2025, ದಿ: 23-04-2025, ದಿ: 06-05-2025 ಹಾಗೂ ದಿ: 16-05-2025 ರಂದು ಕ್ರಮವಾಗಿ ಕಾನೂನು ಮತ್ತು ಬೈಲಾ, ನೀತಿ ರಚನೆ, ತಾಂತ್ರಿಕ ಮತ್ತು ಪ್ರಕಟಣೆ, ಸದಸ್ಯತ್ವ ಮತ್ತು ಹಣಕಾಸು ಉಪಸಮಿತಿ ಸಭೆಗಳನ್ನು ನಡೆಸಲಾಗಿರುತ್ತದೆ.

2) ಸಂಸ್ಥೆಯು ಹೊರತರುತ್ತಿರುವ 'ಕೃಷಿವನ' ತ್ರೈಮಾಸಿಕ ವಾರ್ತಾಪತ್ರಿಕೆ ಏಪ್ರಿಲ್-ಜೂನ್ 2024, ಜುಲೈ-ಸೆಪ್ಟೆಂಬರ್ 2024, ಅಕ್ಟೋಬರ್-ಡಿಸೆಂಬರ್ 2024, ಜನವರಿ-ಮಾರ್ಚ್ 2025 ನ್ನು ಬಿಡುಗಡೆ ಮಾಡಲಾಗಿದೆ.

3) ಪ್ರಸ್ತುತ ಸಾಲಿನಲ್ಲಿ ಸಂಸ್ಥೆಯ ಸದಸ್ಯರ ಸಂಖ್ಯೆಯು 632 ರಿಂದ 673 ಆಗಿರುತ್ತದೆ. ಇದರಲ್ಲಿ 23 ಆಜೀವ ಸದಸ್ಯತ್ವ, 18 ರೈತ ಸದಸ್ಯತ್ವ. 1 ಸಂಸ್ಥಾ ಸದಸ್ಯತ್ವಗಳು ಸೇರ್ಪಡೆಯಾಗಿವೆ.

4) ಕೃಷಿಅರಣ್ಯ ಅಳವಡಿಸಿಕೊಂಡಿರುವ ರೈತರನ್ನು ಪ್ರೋತ್ಸಾಹಿಸಲು ಕೆಲವೊಂದು ಕಾನೂನುಗಳು ಸರಳೀಕರಣಗೊಳಿಸಬೇಕಾದ ಅಗತ್ಯವಿರುವ ಬಗ್ಗೆ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಇಲಾಖೆಯನ್ನು ಕೋರುವಂತೆ ಅಭಿಪ್ರಾಯ ವ್ಯಕ್ತಪಡಿಸಿದ್ದು, ಅದರಂತೆ ಖಾಸಗಿ ಜಮೀನುಗಳಲ್ಲಿ ಬೆಳೆದಿರುವ ಮರಗಳನ್ನು ಕತ್ತಾವಣೆ ಮಾಡಲು ಕಂದಾಯ ಇಲಾಖೆಯ ಅಭಿಪ್ರಾಯ ಪಡೆಯುವುದು, ಆರ್.ಟಿ.ಸಿಯಲ್ಲಿ ಕೃಷಿಅರಣ್ಯ ಮರಗಳನ್ನು ನಮೂದಿಸುವುದು ಹಾಗೂ ಕೃಷಿಅರಣ್ಯ ಮರಗಳಿಗೆ ಜಿ.ಎಸ್.ಟಿ. ವಿನಾಯತಿ ನೀಡುವುದರ ಬಗ್ಗೆ ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಮುಖಸ್ಥರಿಗೆ ಪತ್ರ ಬರೆದು ಕೋರಲಾಗಿದೆ.

5) ಕರ್ನಾಟಕ ಅರಣ್ಯ ಇಲಾಖೆಯ ಶ್ರೀಗಂಧ ಮರಗಳ ಕತ್ತಾವಣೆ, ಸಾಗಾಣಿಕೆ ಮತ್ತು ವಿಲೇವಾರಿ ಮಾಡುವ ಕುರಿತು ನಿಯಮ 108ಕ್ಕೆ ತಿದ್ದುಪಡಿ ಮಾಡಿ ಆದೇಶವನ್ನು ಹೊರಡಿಸಿರುತ್ತದೆ ಅದರ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

- ರೈತರು ತಮ್ಮ ಸ್ವಂತ ಜಮೀನಿನಲ್ಲಿ ಬೆಳೆದ ಶ್ರೀಗಂಧ ಮರಗಳನ್ನು ಸರ್ಕಾರಿ ಶ್ರೀಗಂಧ ಕೋಠಿ, ಮೈಸೂರು, ಶಿವಮೊಗ್ಗ ಮತ್ತು ಧಾರವಾಡ, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ಬೆಂಗಳೂರು ಮತ್ತು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ, ಬೆಂಗಳೂರು ಸಂಸ್ಥೆಗಳಲ್ಲದೇ ಇತರೆ ಯಾರಿಗಾದರೂ (any other entity) ಮಾರಾಟ ಮುಕ್ತವಾಗಿ ಮಾಡಲು ಅವಕಾಶ ಕಲ್ಪಿಸಲಾಗಿದೆ.
- ರೈತರು ತಮ್ಮ ಹಿಡುವಳಿ ಜಮೀನಿನಲ್ಲಿ ಬೆಳೆದಿರುವ ಶ್ರೀಗಂಧ ಮರಗಳ ವಿವರಗಳನ್ನು ಪಹಣಿ (RTC) ಯಲ್ಲಿ ದಾಖಲಿಸಿದ್ದ ಹಾಗೂ ಹಿಡುವಳಿ ಜಮೀನಿನ ಸುತ್ತಲೂ ಹಿಡುವಳಿ ಜಮೀನಿದ್ದ ಪ್ರಕರಣಗಳಲ್ಲಿ ಕಂದಾಯ ಇಲಾಖೆಯ ಅಭಿಪ್ರಾಯ ಅವಶ್ಯಕತೆ ಇರುವುದಿಲ್ಲ.
- ರೈತರು ತಾವು ಬೆಳೆದಿರುವ ಶ್ರೀಗಂಧ ಮರಗಳನ್ನು ವಯಸ್ಸಿನ ತಾರತಮ್ಯವಿಲ್ಲದೇ ಕತ್ತಾವಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಈ ಕುರಿತಂತೆ ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಅರಣ್ಯ ಇಲಾಖೆಯ ಪತ್ರ ಸಂಖ್ಯೆ: ಅಪ್ರಮುಅಸಂ(ಅಸಂನಿ)ಬಿ3ಸೇಲ್ಸ್‌ಸಿಆರ್-06/2025-26 ದಿ: 10-06-2025ರಲ್ಲಿ ನೋಡಬಹುದು. ಅಲ್ಲದೆ ಇದನ್ನು ಸಂಸ್ಥೆಯ ಕೃಷಿವನ ತ್ರೈಮಾಸಿಕ ವಾರ್ತಾಪತ್ರ ಜುಲೈ-ಸೆಪ್ಟೆಂಬರ್ 2025 ರಲ್ಲಿ ಪ್ರಕಟಿಸಲಾಗಿರುತ್ತದೆ.

6) ಸಂಸ್ಥೆಯ ಕೃಷಿಅರಣ್ಯ ಭೇಟಿಯ ಸಂದರ್ಭಗಳಲ್ಲಿ ರೈತರು ಕೃಷಿಅರಣ್ಯ ಪ್ರೋತ್ಸಾಹ ಯೋಜನೆಯಡಿ ನೀಡುವ ಸಸಿಗಳನ್ನು ಇಲಾಖೆಯು ನೆಡುತೋಪುಗಳಿಗಾಗಿ ಬೆಳೆಸುವ ಗುಣಮಟ್ಟದ ಸಸಿಗಳಂತೆಯೇ ಬೆಳೆಸಿ ನೀಡಲು ಇಲಾಖೆಯನ್ನು ಕೋರುವಂತೆ ಮನವಿ ಮಾಡಿರುತ್ತಾರೆ. ನೆಡುತೋಪುಗಳಿಗಾಗಿ ಬೆಳೆಸಲಾಗುವಂತೆ ಎತ್ತರದ ಸಸಿಗಳನ್ನೇ ರೈತರಿಗೆ ನೀಡುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಬೆಂಗಳೂರು ಇವರನ್ನು ಕೋರಲಾಗಿರುತ್ತದೆ. ಈ ಪತ್ರಕ್ಕೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅಭಿವೃದ್ಧಿ) ರವರ ಕಛೇರಿಯಿಂದ ಪ್ರತಿಕ್ರಿಯೆ ದೊರೆತಿದ್ದು ಈ ಕೆಳಗಿನಂತಿರುತ್ತದೆ.

- 2025–26ನೇ ಸಾಲಿನಲ್ಲಿ ಸಾರ್ವಜನಿಕ ವಿತರಣೆಗಾಗಿ ಸಸಿ ಬೆಳೆಸುವ (RSPD) ಕಾರ್ಯಕ್ರಮದಡಿ 6"X9" ಮತ್ತು 8"X12" ಗಾತ್ರದ ಸಸಿಗಳನ್ನು ಬೆಳೆಸಲು ಗುರಿ ನಿಗಧಿಪಡಿಸಲಾಗಿರುತ್ತದೆ.
- RSPD ಕಾರ್ಯಕ್ರಮದಡಿ ಬೆಳೆಸಲಾಗಿರುವ ಸಸಿಗಳನ್ನು ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರದ ಆದೇಶ ಸಂಖ್ಯೆ: ಅಪಜೀ 57 ಎಫ್ಎಪಿ 2022 ದಿನಾಂಕ:13-07-2023 ರಂತೆ ರಿಯಾಯಿತಿ ದರದಲ್ಲಿ ರೈತರಿಗೆ ಕೃಷಿಅರಣ್ಯ ಪ್ರೋತ್ಸಾಹ ಯೋಜನೆಯಡಿ ಸಸಿಗಳನ್ನು ವಿತರಿಸಲಾಗಿರುತ್ತದೆ.
- ಮುಂದುವರೆದು, 10"X16" ಮತ್ತು 14"X20" ಅಳತೆಯ ಸಸಿಗಳ ಉತ್ಪಾದನಾ ವೆಚ್ಚವು ಅಧಿಕವಾಗಿರುವುದರಿಂದ, ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರಿ ಆದೇಶದ ಪ್ರಕಾರ 10"X16" ಮತ್ತು 14"X20" ಅಳತೆಯ ಸಸಿಗಳಿಗೆ ಯಾವುದೇ ರಿಯಾಯಿತಿ ಇಲ್ಲದೆ, ಉತ್ಪಾದನಾ ವೆಚ್ಚದಲ್ಲಿಯೇ ಮಾರಾಟ ಮಾಡಲು ಆದೇಶವಾಗಿರುತ್ತದೆ. ಇದರಿಂದ, ರೈತರಿಗೆ ರಿಯಾಯಿತಿ ದರದಲ್ಲಿ ಸಸಿಗಳನ್ನು ವಿತರಿಸಲು ಪ್ರಸ್ತುತ ನಿಯಮಗಳಲ್ಲಿ ಅವಕಾಶ ಇರುವುದಿಲ್ಲ.
- ಮುಂದಿನ ಸಾಲಿನಲ್ಲಿ ರೈತರ ಬೇಡಿಕೆಯನುಸಾರ ಎತ್ತರದ 10"X16" ಮತ್ತು 14"X20" ಅಳತೆಯ) ಸಸಿಗಳನ್ನು ಬೆಳೆಸಿ, ಕೃಷಿಅರಣ್ಯ ಪ್ರೋತ್ಸಾಹ ಯೋಜನೆಯಡಿ ವಿತರಿಸುವ ಬಗ್ಗೆ ಸರ್ಕಾರದಿಂದ ಸೂಕ್ತ ಆದೇಶ ಪಡೆದು ಕ್ರಮ ಕೈಗೊಳ್ಳಲಾಗುವುದು.

7) ಸಂಸ್ಥೆಯ ಬೈಲಾಗಳಿಗೆ ಕೆಲವೊಂದು ತಿದ್ದುಪಡಿ ಅವಶ್ಯಕತೆ ಇರುವ ಬಗ್ಗೆ 11ನೇ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಸದಸ್ಯರಾದ ಶ್ರೀ ಎ.ಎಂ. ಅಣ್ಣಯ್ಯರವರು ಕಾರ್ಯಕಾರಿ ಸಮಿತಿಯನ್ನು ಬೈಲಾಗಳಿಗೆ ತಿದ್ದುಪಡಿ ತರುವಂತೆ ಕೋರಿದ್ದರು. ಅದರಂತೆ ಕಾನೂನು ಮತ್ತು ಬೈಲಾ ಉಪಸಮಿತಿಯು ಡಾ. ಎಸ್.ಸಿ.ವಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಚರ್ಚಿಸಿ ಬೈಲಾಗಳಿಗೆ ಕೆಲವೊಂದು ತಿದ್ದುಪಡಿ ಸೂಚಿಸಿ ಕರಡನ್ನು ಸಿದ್ಧಪಡಿಸಿದ್ದು, ಕಾರ್ಯಕಾರಿ ಸಮಿತಿಯು ಕರಡನ್ನು ಪರಿಶೀಲಿಸಿರುತ್ತದೆ. ಅದರಂತೆ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗುತ್ತಿದೆ.

8) ಸಂಸ್ಥೆಯು 2019 ಜನವರಿಯಿಂದ 'ಕೃಷಿವನ' ತ್ರೈಮಾಸಿಕ ವಾರ್ತಾಪತ್ರವನ್ನು ಹೊರತರುತ್ತಿದ್ದು, ಅದರಲ್ಲಿ ಕೃಷಿಅರಣ್ಯ ಪ್ರಭೇದಗಳು, ಮಾದರಿಗಳು, ಕಾನೂನು ಸಮಸ್ಯೆಗಳು, ಕರ್ನಾಟಕ ಅರಣ್ಯ ಇಲಾಖೆಯ ಪ್ರಮುಖ ಆದೇಶಗಳು ಇತ್ಯಾದಿ ಕುರಿತ ಮಾಹಿತಿಯನ್ನು ಪ್ರಕಟಿಸಲಾಗುತ್ತಿದೆ. ಇದನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಸಂಸ್ಥೆಯ ಜಾಲತಾಣದಲ್ಲಿಯೂ ಉಚಿತವಾಗಿ ಲಭ್ಯವಿರುವಂತೆ ವ್ಯವಸ್ಥೆ ಕಲ್ಪಿಸಿದೆ. ಅಲ್ಲದೆ ಸಂಸ್ಥೆಯ ಕಛೇರಿಗೆ ಭೇಟಿ ನೀಡುವ ಆಸಕ್ತರಿಗೆ ಹಾಗೂ ದೂರವಾಣಿ ಮೂಲಕ ವೈಯಕ್ತಿಕವಾಗಿ ಸಂಪರ್ಕಿಸುವವರಿಗೆ ಹಾಗೂ ಕ್ಷೇತ್ರ ಭೇಟಿಯ ಸಮಯದಲ್ಲಿಯೂ ಸಹ ಕೃಷಿಅರಣ್ಯ ಕೈಗೊಳ್ಳುವವರಿಗೆ ಮಾಹಿತಿಯನ್ನು ನೀಡುತ್ತಿದೆ.

(ಡಾ. ಎಸ್. ರಮೇಶ್)
ಕಾರ್ಯದರ್ಶಿಗಳು
ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ,
ಬೆಂಗಳೂರು

## ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ 2024–25ನೇ ಸಾಲಿನ ವಾರ್ಷಿಕ ವರದಿ

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಹನ್ನೆರಡನೇ ಸರ್ವ ಸದಸ್ಯರ ಸಭೆಗೆ 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸಲು ಹರ್ಷಿಸುತ್ತೇನೆ.

2024–25ನೇ ಸಾಲಿನಲ್ಲಿ ಜಾರಿಗೊಳಿಸಿದ ಕಾರ್ಯಕ್ರಮಗಳು ಈ ಕೆಳಕಂಡಂತಿವೆ:

ಪ್ರಸ್ತುತ ಸಾಲಿನಲ್ಲಿ ಸಂಸ್ಥೆಯ ಸದಸ್ಯರ ಸಂಖ್ಯೆಯು 632 ರಿಂದ 673 ಕ್ಕೆ ಏರಿಕೆಯಾಗಿದೆ. ಇದರಲ್ಲಿ ಇದರಲ್ಲಿ 23 ಆಜೀವ ಸದಸ್ಯತ್ವ, 18 ರೈತ ಸದಸ್ಯತ್ವ. 1 ಸಂಸ್ಥಾ ಸದಸ್ಯತ್ವಗಳು ಸೇರಿವೆ.

1) ದಿ: 15-04-2024 ರಂದು ದೊಡ್ಡಬಳ್ಳಾಪುರದ ಕೃಷಿಅರಣ್ಯ ಕ್ಷೇತ್ರಗಳಿಗೆ ಸಂಸ್ಥೆಯ ಕಾರ್ಯಕಾರಿ ಸಮಿತಿ, ಟ್ರೀ ಲ್ಯಾಂಡ್ಸ್ ಪ್ರಾಡಕ್ಟ್ ಅಂಡ್ ಸರ್ವಿಸಸ್‌ನ ಕಾರ್ಯ ನಿರ್ವಾಹಕ ನಿರ್ದೇಶಕರು, ನಿವೃತ್ತ ಅರಣ್ಯಾಧಿಕಾರಿಗಳ ಸಂಘದ ಅಧ್ಯಕ್ಷರು, ಪ್ರಗತಿಪರ ರೈತರುಗಳಾದ ಡಾ. ಎನ್.ಸಿ. ಪಟೇಲ್ ನಾಗದಾಸನಹಳ್ಳಿ, ಕುರುವಗೆರೆ ನರಸಿಂಹಮೂರ್ತಿ ರವರ ನೇತೃತ್ವದಲ್ಲಿ ಸ್ಥಳೀಯ ಅರಣ್ಯಾಧಿಕಾರಿ ಜೊತೆಯಲ್ಲಿ ತೇಗ, ಹೆಬ್ಬೇವು ಇತರೆ ಕೃಷಿಅರಣ್ಯ ಕ್ಷೇತ್ರಗಳಿಗೆ ಭೇಟಿ ನೀಡಿ ಸಿಲ್ವಿಕಲ್ಚರ್ ಪ್ರಾಕ್ಟೀಸಸ್, ಮಾರ್ಕೆಟಿಂಗ್ ವ್ಯವಸ್ಥೆ ಹಾಗೂ ಇಲಾಖೆಯ ಸವಲತ್ತುಗಳ ಬಗ್ಗೆ ತಿಳುವಳಿಕೆ ನೀಡಲಾಯಿತು.
2) ದಿ: 25–04–2024 ರಂದು ಕಾರ್ಯಕಾರಿ ಸಮಿತಿ ಸಭೆಯನ್ನು ನಡೆಸಲಾಯಿತು.
3) ದಿ: 20–05–2024 ರಂದು ಕೃಷಿ ತಂತ್ರಜ್ಞರ ಸಂಸ್ಥೆ, ಬೆಂಗಳೂರು ಇವರು ಆಯೋಜಿಸಿದ್ದ 'ವಿಶ್ವ ಜೇನು ದಿನಾಚರಣೆ' ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಎ.ಬಿ. ಪಾಟೀಲ್ ಇವರು ಭಾಗವಹಿಸಿ ಕೃಷಿಅರಣ್ಯದಲ್ಲಿ ಜೇನು ಸಾಕಾಣಿಕೆ ಮಹತ್ವದ ಕುರಿತು ಮಾಹಿತಿ ಹಂಚಿಕೊಂಡಿರುತ್ತಾರೆ.
4) ದಿ: 05–06–2024 ರಂದು ಹುಳದೇನಹಳ್ಳಿಯ ರಾಮ ಮಾಧವ ಪ್ರೌಢಶಾಲೆ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ ಇಲ್ಲಿ ಅರಣ್ಯ ಇಲಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಕೃಷಿ ವಿವಿ, ಜಿಕೆವಿಕೆ, ಬೆಂಗಳೂರು ರೋಟರಿ ಕ್ಲಬ್, ಕೆವಿಕೆ, ಕೋಲಾರ ಇವರ ಸಹಯೋಗದೊಂದಿಗೆ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಲಾದ ಗಿಡನೆಡುವ ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಎ.ಬಿ. ಪಾಟೀಲ್ ರವರು ಭಾಗವಹಿಸಿರುತ್ತಾರೆ, ಹಾಗೂ ವಿಶ್ವ ಪರಿಸರ ದಿನಾಚರಣೆಯ ಮಹತ್ವ, ಪರಿಸರದ ಸಂರಕ್ಷಣೆಯ ಕುರಿತು ವಿದ್ಯಾರ್ಥಿಗಳೊಂದಿಗೆ ಮಾಹಿತಿ ಹಂಚಿಕೊಂಡಿರುತ್ತಾರೆ.
5) ದಿ: 11–06–2024 ರಂದು ಕಾರ್ಯಕಾರಿ ಸಮಿತಿ ಸಭೆ ನಡೆಸಲಾಯಿತು.
6) ದಿ: 11–06–2024 ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಂದು ಸಂಸ್ಥೆಯ 'ಕೃಷಿವನ' ತ್ರೈಮಾಸಿಕ ವಾರ್ತಾಪತ್ರ ಜನವರಿ–ಮಾರ್ಚ್ 2024 ನ್ನು ಶ್ರೀಮತಿ ಸೀಮಾ ಗರ್ಗ್, ಭಾ.ಅ.ಸೇ., ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅಭಿವೃದ್ಧಿ) ಇವರಿಂದ ಬಿಡುಗಡೆ ಮಾಡಿಸಲಾಯಿತು.
7) ದಿ: 28–06–2024 ರಂದು ಕೃಷಿ ತಂತ್ರಜ್ಞರ ಸಂಸ್ಥೆ, ಬೆಂಗಳೂರು, ಕೃಷಿ, ಜಲಾನಯನ ಅಭಿವೃದ್ಧಿ ಹಾಗೂ ಅರಣ್ಯ ಇಲಾಖೆಗಳು, ಕರ್ನಾಟಕ ಸರ್ಕಾರ, ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರು, ಬ್ಯಾಂಬೂ ಸೊಸೈಟಿ ಆಫ್, ಇಂಡಿಯಾ ಇವರುಗಳ ಸಂಯುಕ್ತ ಆಶ್ರಯದಲ್ಲಿ ಸಂಗಮ ಸಭಾಂಗಣ, ಕೃಷಿ ಇಲಾಖೆ ಆವರಣ, ಶೇಷಾದ್ರಿ ರಸ್ತೆ, ಬೆಂಗಳೂರು ಇಲ್ಲಿ ಒಂದು ದಿನದ ರಾಜ್ಯ

ಮಟ್ಟದ 'ಬಿದಿರು ಕೃಷಿ, ಸಂಸ್ಕರಣೆ, ಮೌಲ್ಯವರ್ಧನೆ, ಮಾರುಕಟ್ಟೆ ಮತ್ತು ಬಿದಿರು ಮೌಲ್ಯವರ್ಧಿತ ವಸ್ತುಗಳ ಪ್ರದರ್ಶನ' ವಿಷಯದ ಕುರಿತಂತೆ ಕಾರ್ಯಾಗಾರ ನಡೆಸಲಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸನ್ಮಾನ್ಯ ಕರ್ನಾಟಕ ಸರ್ಕಾರದ ಕೃಷಿ ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿ ನಡೆಸಿಕೊಟ್ಟರು. ಕೃಷಿ ತಂತ್ರಜ್ಞರ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಸಿ.ಎನ್. ನಂದಿನಿಕುಮಾರಿ ಈ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದರು. ಕೃಷಿ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತರು, ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಅಧ್ಯಕ್ಷರು, ಬ್ಯಾಂಬೂ ಸೊಸೈಟಿ ಆಫ್ ಇಂಡಿಯಾದ ಅಧ್ಯಕ್ಷರು, ಪದಾಧಿಕಾರಿಗಳು ಭಾಗವಹಿಸಿದ್ದರು. ಮೇಲಿನ ಸಂಸ್ಥೆಗಳ ಕಾರ್ಯಕಾರಿ ಸಮಿತಿ ಸದಸ್ಯರು, ಸದಸ್ಯರು ಭಾಗವಹಿಸಿದ್ದರು. ಬಿದಿರು ಬೆಳೆಗಾರರು, ಕೃಷಿಅರಣ್ಯ ರೈತರು, ಇಲಾಖಾ ಸಿಬ್ಬಂದಿಗಳು, ಬಿದಿರು ಉದ್ಯಮದಾರರು ಸೇರಿದಂತೆ ಅನೇಕ ಸಾರ್ವಜನಿಕರು ಕಾರ್ಯಾಗಾರದ ಸದುಪಯೋಗ ಪಡೆದುಕೊಂಡರು.

ಉದ್ಘಾಟನಾ ನುಡಿಗಳನ್ನಾಡಿದ ಸನ್ಮಾನ್ಯ ಕೃಷಿ ಸಚಿವರು ಕಾರ್ಯಾಗಾರ ಆಯೋಜಕರ ಪ್ರಯತ್ನವನ್ನು ಶ್ಲಾಘಿಸುತ್ತಾ ಬಿದಿರು ಕೃಷಿಯನ್ನು ಪ್ರೋತ್ಸಾಹಿಸಲು ಎಲ್ಲಾ ರೀತಿಯ ಸಹಕಾರವನ್ನು ತಾವು ನೀಡುವುದಾಗಿ ತಿಳಿಸಿದರು.

ಈ ಕಾರ್ಯಾಗಾರದಲ್ಲಿ ರಾಷ್ಟ್ರ, ರಾಜ್ಯದಲ್ಲಿ ಬಿದಿರು ಕೃಷಿ ಚಿತ್ರಣ, ರಾಜ್ಯದಲ್ಲಿ ಜಿಲ್ಲಾವಾರು ಬಿದಿರು ತಳಿಗಳ ಕೃಷಿ, ಬಿದಿರು ಮಾರುಕಟ್ಟೆ ಚಿಂತನೆ, ಕಟ್ಟಡ ನಿರ್ಮಾಣ ಹಾಗೂ ಪೀಠೋಪಕರಣಗಳ ತಯಾರಿಕೆಯಲ್ಲಿ ಬಿದಿರಿನ ಬಳಕೆ, ಕರ್ನಾಟಕದಲ್ಲಿ ಬಿದಿರು ಮಿಶನ್ ಚಟುವಟಿಕೆಗಳು ಹಾಗೂ ಬಿದಿರು ಬೆಳೆಗಾರರು ಹಾಗೂ ಬಿದಿರು ಉದ್ಯಮಿಗಳೊಂದಿಗೆ ತಜ್ಞರ ತಂಡದ ಚರ್ಚೆ ವಿಷಯದ ಕುರಿತು ತಾಂತ್ರಿಕ ಅಧಿವೇಶನಗಳ ಮೂಲಕ ಮಾಹಿತಿಯನ್ನು ಹಂಚಿಕೊಳ್ಳಲಾಯಿತು. ಅಲ್ಲದೆ ಬಿದಿರು ಮೌಲ್ಯವರ್ಧಿತ ವಸ್ತುಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಾಗಾರದಲ್ಲಿ ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯು ಕೃಷಿಅರಣ್ಯದ ಕುರಿತಂತೆ ಪ್ರಕಟಿಸುತ್ತಿರುವ 'ಕೃಷಿವನ' ತ್ರೈಮಾಸಿಕ ವಾರ್ತಾಪತ್ರದಲ್ಲಿರುವ ಮಾಹಿತಿಗಳನ್ನು ಕ್ರೋಢೀಕರಿಸಿ ಕೃಷಿಅರಣ್ಯದ ಮಾಹಿತಿಯನ್ನೊಳಗೊಂಡ 'ಕೃಷಿಅರಣ್ಯ-ರೈತರಿಗೊಂದು ಆಶಾಕಿರಣ' ವಿಶೇಷ ಸಂಚಿಕೆಯನ್ನು ಸನ್ಮಾನ್ಯ ಕರ್ನಾಟಕ ಸರ್ಕಾರದ ಕೃಷಿ ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿಯವರು ಬಿಡುಗಡೆಗೊಳಿಸಿದರು. ಸದರಿ ಪುಸ್ತಕವು ಕೃಷಿಅರಣ್ಯದ ಸಮಗ್ರ ಮಾಹಿತಿಯನ್ನು ಒಳಗೊಂಡ ಪುಸ್ತಕವಾಗಿರುವುದರಿಂದ, ಇದರ ಸದುಪಯೋಗ ಪಡೆದುಕೊಳ್ಳಲು ತಿಳಿಸಿದರು.

8) ದಿ: 30-06-2024 ರಂದು ಚಿತ್ರದುರ್ಗ ತಾಲೂಕಿನ ಕ್ಯಾಸಾಪುರ ಗ್ರಾಮದಲ್ಲಿ ಅಡಿಕೆ ಮತ್ತು ಪರಂಗಿ ಬೆಳೆಯ ಕೃಷಿಅರಣ್ಯ ಕ್ಷೇತ್ರವನ್ನು ಹಾಗೂ ಕುಸುಮಶಿವ ಸೌರಶಕ್ತಿ ವಿದ್ಯುತ್ ಉತ್ಪಾದನಾ ಘಟಕಕ್ಕೆ ಸದಸ್ಯರಾದ ಶ್ರೀ ಎ.ಎಂ. ಅಣ್ಣಯ್ಯ ಇವರು ಶ್ರೀ ಎನ್. ಶಿವಕುಮಾರ್ ಐಪಿಎಸ್ ನಿವೃತ್ತ ಮತ್ತು ಕೆ.ಜಿ. ಮಂಜಪ್ಪ ಹೆಚ್ಚುವರಿ ಕೃಷಿ ನಿರ್ದೇಕರು ನಿವೃತ್ತ ಇವರೊಂದಿಗೆ ಭೇಟಿನೀಡಿ ವಿಚಾರ ವಿನಿಮಯ ಮಾಡಿಕೊಂಡರು. ಹಾಗೂ ಹಿರಿಯೂರು ತಾಲೂಕಿನ ವಾಣಿವಿಲಾಸಪುರದಲ್ಲಿ ಅಗಸೆ ಮರದ ನೆರಳಲ್ಲಿ ಅಡಿಕೆ ಗಿಡಗಳನ್ನು ಬೆಳೆಸಿರುವ ಕ್ಷೇತ್ರವನ್ನು ವೀಕ್ಷಿಸಲಾಯಿತು.

9) ದಿನಾಂಕ: 03.08.2024ರಂದು ಶ್ರೀ ಎ.ಎಂ. ಅಣ್ಣಯ್ಯ ರವರು ದಾವಣಗೆರೆಯಲ್ಲಿ ಮರದ ಗಾಣದಿಂದ ವಿವಿಧ ಎಣ್ಣೆ ತೆಗೆದು ಮಾರುವ ಸ್ವಸಹಾಯ ಮಹಿಳಾ ಗುಂಪಿನ ಚಾರ್ವಿ ಅಥೆಂಟಿಕ್ ಉದ್ದಿಮೆಗೆ

ಭೇಟಿ ನೀಡಿ ವಿಚಾರ ವಿನಿಮಯ ಮಾಡಲಾಯಿತು. ಕೃಷಿಅರಣ್ಯದಲ್ಲಿ ಮಧ್ಯಂತರ ಬೆಳೆಗಳಾದ ಶೇಂಗ, ಸೂರ್ಯಕಾಂತಿ, ಕುಸುಬೆ, ಎಳ್ಳು, ಸಾಸುವೆ ಮತ್ತು ತೆಂಗಿನ ಎಣ್ಣೆಯನ್ನು ವೈಜ್ಞಾನಿಕವಾಗಿ ತೆಗೆಯಲಾಗುತ್ತಿದೆ.

10) ದಿನಾಂಕ: 09.08.2024 ರಂದು "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಕ್ಷ ಹಾಗು ವನ್ಯಜೀವಿ ರಕ್ಷಣೆ" ಬಗ್ಗೆ ಒಂದು ದಿನದ ಕಾರ್ಯಾಗಾರ ನಡೆಸಲಾಯಿತು. ಬಿಬಿಎಂಪಿಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಸ್ವಾಮಿ, ಪ್ರಕಾಶ್ ಮತ್ತು ಬೆಂಗಳೂರು ಅರಣ್ಯ ಸಂಚಾರಿದಳದ ಸಹಾಯಕ ಸಂರಕ್ಷಣಾಧಿಕಾರಿಗಳಾದ ಪಿ.ಎಂ. ಸರಿತಾ, ನಗರ ವಿಭಾಗದ ಸ.ಅ.ಸಂ. ಶಂಕರಗೌಡ, ಬಿಬಿಎಂಪಿ ಸ.ಅ.ಸಂ. ಸಂತೋಷ್ ಎಂ.ಎಸ್. ಹಾಗೂ ಇತರೆ ಅಧಿಕಾರಿ, ಸಿಬ್ಬಂದಿಗಳು ಭಾಗವಹಿಸಿದ್ದರು.

11) ದಿನಾಂಕ: 21.08.2024 ರಂದು ಶ್ರೀ ಅಜಯ್ ಮಿಶ್ರ ಅವರ ಅಧ್ಯಕ್ಷತೆಯಲ್ಲಿ ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸಭೆ ನಡೆಸಿ ಕೃಷಿವನ ತ್ರೈಮಾಸಿಕ ಪತ್ರಿಕೆ ವಾರ್ತಾಪತ್ರ ಏಪ್ರಿಲ್-ಜೂನ್ 2024 ಅನ್ನು ಬಿಡುಗಡೆ ಮಾಡಲಾಯಿತು.

12) ದಿನಾಂಕ: 30.08.2024 ರಂದು ಶ್ರೀ ಎ.ಎಂ. ಅಣ್ಣಯ್ಯ ರವರು ಸಂದೀಪ್ ವಿರೂಪಾಕ್ಷಪ್ಪ, ಕ್ಯಟಕನಾಳ, ಬೈಲಹೊಂಗಲ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ಕೃಷಿಅರಣ್ಯ ಕ್ಷೇತ್ರಕ್ಕೆ ಭೇಟಿ ಚರ್ಚಿಸಲಾಯಿತು.

13) ದಿನಾಂಕ: 12.09.2024 ರಂದು ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರು ಕೃಷಿ ವಿಶ್ವ ವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು ಇವರು ಕೃಷಿ ಮಹಾವಿದ್ಯಾಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಬೆಂಗಳೂರು ಮತ್ತು ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ ಇವರ ಸಂಯುಕ್ತಾಶ್ರಯದಲ್ಲಿ ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕಿನ ಭಕ್ತರಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಹಾಗೂ 'ವನಮಹೋತ್ಸವ' ಕಾರ್ಯಕ್ರಮದ ಭಾಗವಾಗಿ ಅರಣ್ಯ ಸಸಿಗಳಾದ ಬೇವು, ರಕ್ತ ಚಂದನ, ನೇರಳೆ, ಮಹಾಗನಿ, ಹಲಸು ಮುಂತಾದ ಸಸಿಗಳನ್ನು ರೈತರ ಜಮೀನಿನಲ್ಲಿ ನೆಡಲಾಯಿತು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರು, ಸದಸ್ಯರು, ವಿದ್ಯಾರ್ಥಿಗಳು, ರೈತರು, ಪ್ರಾಧ್ಯಾಪಕರು, ಅರಣ್ಯ ಇಲಾಖೆ ಅಧಿಕಾರಿ ಸಿಬ್ಬಂದಿಗಳು ಭಾಗವಹಿಸಿದ್ದರು.

14) ದಿ:28-09-2024 ರಂದು ಸಂಸ್ಥೆಯ ಸದಸ್ಯರಾದ ಶ್ರೀ ಹೆಚ್.ಎ. ಪುರುಷೋತ್ತಮ ರಾವ್ ರವರು ಬರೆದಿರುವ ಪುಸ್ತಕ 'ಕಾಡುಪ್ರತಿಭೆ ಮಾರಪ್ಪ ಬದುಕು-ಸಾಧನೆ' ಮರು ಮುದ್ರಿತ ಪುಸ್ತಕ ಬಿಡುಗಡೆ ಮಾಡಲಾಯಿತು.

15) ದಿ:28-09-2024 ರಂದು ಸಂಸ್ಥೆಯ ವಾರ್ಷಿಕ ಸರ್ವ ಸದಸ್ಯರ ಸಭೆ ಹಾಗೂ 'ಕೃಷಿವನ' ತ್ರೈಮಾಸಿಕ ವಾರ್ತಾಪತ್ರ ಜುಲೈ- ಸೆಪ್ಟೆಂಬರ್ 2024ನ್ನು ಬಿಡುಗಡೆ ಮಾಡಲಾಯಿತು. ಅಭಿನಂದನಾ ಹಾಗೂ ಟಿ.ಹೆಚ್. ಮಲ್ಲಿಕಾರ್ಜುನ ಪ್ರಶಸ್ತಿ ಪ್ರದಾನ ಸಮಾರಂಭ ನಡೆಸಲಾಯಿತು.

16) ದಿ: 08-10-2024 ರಂದು ಸಂಸ್ಥೆಯ ಜಂಟಿ ಕಾರ್ಯಕಾರಿ ಸಮಿತಿ ಸಭೆಯನ್ನು ಶ್ರೀ ಪ್ರತಾಪ್ ಹೆಗಡೆ, ನೆಲಮಂಗಲ ಬಳಿಯ ಯಂಟಗಾನಹಳ್ಳಿ ಇವರ ಕೃಷಿಅರಣ್ಯ ಕ್ಷೇತ್ರದಲ್ಲಿ ನಡೆಸಲಾಯಿತು.

17) ದಿ:18-11-2024 ರಂದು 2023-24ನೇ ಸಾಲಿನ ಲೆಕ್ಕಪತ್ರಗಳನ್ನು ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, ನಾಲ್ಕನೇ ವಲಯ, ಮಲ್ಲೇಶ್ವರಂ, 8ನೇ ಅಡ್ಡರಸ್ತೆ, ಬೆಂಗಳೂರು ಇವರಿಗೆ ಸಲ್ಲಿಸಿ ಸ್ವೀಕೃತಿ ಪತ್ರ ಪಡೆಯಲಾಗಿದೆ.

18) ದಿ: 27-11- 2024 ರಂದು ಕಾರ್ಯಕಾರಿ ಸಮಿತಿ ಸಭೆಯನ್ನು ನಡೆಸಲಾಯಿತು.

19) ದಿ: 27-11-2024 ರಂದು ನಡೆದ ಸಭೆಯಲ್ಲಿ ದಿವಂಗತ ಎ.ಎಸ್. ಸದಾಶಿವಯ್ಯರವರ ಮಗಳಾದ ಶ್ರೀಮತಿ ಡಾ. ಅನಿತಾ ಸದಾಶಿವಯ್ಯ ಹಾಗೂ ಅವರ ಮಗ ಶ್ರೀ ಅಮರ್ ಸದಾಶಿವಯ್ಯ ರವರು ಹಾಜರಿದ್ದು, ಪ್ರತಿ ವರ್ಷ ದಿವಂಗತರ ಹೆಸರಿನಲ್ಲಿ ಉತ್ತಮ ಕೃಷಿಅರಣ್ಯ ಪದ್ಧತಿಗಳನ್ನು ಅಳವಡಿಸಿಕೊಂಡಿರುವ ಒಬ್ಬರು ರೈತರನ್ನು ಗುರುತಿಸಿ ಪ್ರಶಸ್ತಿ ನೀಡಲು ರೂ.2,00,000/-ಗಳನ್ನು ದೇಣಿಗೆಯಾಗಿ ಸಂಸ್ಥೆಗೆ ನೀಡಿರುತ್ತಾರೆ. ಹಾಗೂ ಸದರಿ ಮೊತ್ತವನ್ನು ನಿಶ್ಚಿತ ಠೇವಣಿಯಲ್ಲಿಟ್ಟಿದ್ದು, ಬರುವ ಬಡ್ಡಿ ಹಣದಿಂದ ಪ್ರಶಸ್ತಿ ನೀಡಲಾಗುವುದು.

20) ದಿ:18-01-2025 ರಂದು ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಕಾರ್ಯಕಾರಿ ಸಮಿತಿ ಸಭೆಯನ್ನು ನಡೆಸಲಾಯಿತು.

21) ದಿ:10- 02-2025 ರಂದು 'ಬಿದಿರು ಬೆಳೆಸುವಿಕೆ, ಕಟಾವು (ಹೊರತೆಗೆಯುವಿಕೆ) ಹಾಗೂ ಮಾರಾಟ' ವಿಷಯದ ಕುರಿತು ವೆಬಿನಾರ್ ಕಾರ್ಯಕ್ರಮ ನಡೆಸಲಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಕೆ.ಎನ್. ಮೂರ್ತಿ, ಕಾರ್ಯನಿರ್ವಾಹಕ ನಿರ್ದೇಶಕರು, ಟ್ರೀ ಲ್ಯಾಂಡ್ಸ್ ಪ್ರಾಡಕ್ಟ್ಸ ಅಂಡ್ ಸರ್ವಿಸಸ್, ಬೆಂಗಳೂರು, ಶ್ರೀ ಪುನಟಿ ಶ್ರೀಧರ್, ಅಧ್ಯಕ್ಷರು, ಬ್ಯಾಂಬೂ ಸೊಸೈಟಿ ಆಫ್ ಇಂಡಿಯಾ, ಬೆಂಗಳೂರು, ಡಾ. ರಾಮಕೃಷ್ಣ ಹೆಗಡೆ, ಪ್ರೊಫೆಸರ್ ಹಾಗೂ ಮುಖ್ಯಸ್ಥರು, ಸಿಲ್ವಿಕಲ್ಚರ್ ಹಾಗೂ ಕೃಷಿಅರಣ್ಯ ವಿಭಾಗ, ಕೃಷಿಅರಣ್ಯ ಕಾಲೇಜು, ಪೊನ್ನಂಪೇಟೆ, ಶ್ರೀ ಪರಮೇಶ್ವರನ್ ಕೃಷ್ಣ ಅಯ್ಯರ್, ಬ್ಯಾಂಬೂ ಪೆಕ್ಕರ್ ಎಂಬ ಸಂಸ್ಥೆಯ ಸಂಸ್ಥಾಪಕರು, ಇವರು ಭಾಗವಹಿಸಿದ್ದರು. ಬಿದಿರು ಬೆಳೆಸುವಿಕೆ, ಕಟಾವು, ಮಾರುಕಟ್ಟೆ ಇತ್ಯಾದಿ ವಿಷಯಗಳನ್ನು ವೆಬಿನಾರ್ ಕಾರ್ಯಕ್ರಮದಲ್ಲಿ ಚರ್ಚಿಸಲಾಯಿತು.

22) ದಿ:12-02-2025 ರಂದು ಕಾನೂನು ಮತ್ತು ಬೈಲಾ ಉಪಸಮಿತಿ ಸಭೆಯನ್ನು ನಡೆಸಲಾಯಿತು.

23) ದಿ:11-03-2025 ರಂದು ಶಿಡ್ಲಘಟ್ಟ ತಾಲ್ಲೂಕು, ಅಂಕಿತಟ್ಟಿ ಹಾಗೂ ಭಕ್ತರಹಳ್ಳಿ ಗ್ರಾಮದ ಬಳಿಯ ಶ್ರೀ. ಸಂತೆ ನಾರಾಯಣಸ್ವಾಮಿ, ನಿವೃತ್ತ ತೋಟಗಾರಿಕೆ ಅಧಿಕಾರಿರವರ ತೋಟದಲ್ಲಿ ಕೃಷಿಅರಣ್ಯ ಕ್ಷೇತ್ರ ಭೇಟಿ ನಡೆಸಿ ಅವರೊಂದಿಗೆ ಚರ್ಚಿಸಲಾಯಿತು.

24) ದಿ: 08-04-2025 ರಂದು ಸಂಸ್ಥೆಯ ಕೃಷಿವನ ಅಕ್ಟೋಬರ್-ಡಿಸೆಂಬರ್ 2024 ಅನ್ನು ಶ್ರೀಮತಿ ಮೀನಾಕ್ಷಿ ನೇಗಿ, ಭಾ.ಅ.ಸೇ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಇವರಿಂದ ಬಿಡುಗಡೆ ಮಾಡಿಸಲಾಯಿತು ಹಾಗೂ ಕೃಷಿಅರಣ್ಯ ಪ್ರೋತ್ಸಾಹಿಸುವ ಸಂಬಂಧ ಇರುವ ಕಾನೂನು ಅಡೆತಡೆಗಳ ಕುರಿತಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲಾಯಿತು.

(ಡಾ. ಎಸ್. ರಮೇಶ್)
ಕಾರ್ಯದರ್ಶಿಗಳು
ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ,
ಬೆಂಗಳೂರು

# AUDITORS REPORT

To,

THE MEMBERS,
**Institution of Agroforestry Farmers and Technologists**
Ground floor, Vanavikas Building, 18th Cross, Malleshwaram
Bangalore-560003.

1. We have audited the attached Balance Sheet of **Institution of Agroforestry Farmers and Technologists**, as at **31st March 2025**, the Income & Expenditure Account for the year ended on that date. Preparations of financial statements are the responsibility of the management. Our responsibility is to express an opinion on these financial statements based on our audit

2. We have conducted our audit in accordance with the auditing standards generally acceptable in India. These standards require that we plan and perform the audit to obtain the reasonable assurance about whether the financial statements are free from material misstatement. An audit includes examining, on a test basis, the evidence supporting the amounts and disclosures in the financial statements. An audit also includes assessing the accounting principles used and significant estimates made by the management, as well as evaluating the overall financial statement presentation. We believe that our audit provides a reasonable basis for our opinion.

3. Further to our comments in the Annexure referred to above, we report that:

   (i) We have obtained all the information and explanation, which to the best of our knowledge and belief were necessary for the purposes of our audit.

   (ii) The Balance Sheet and the Income and Expenditure account dealt with by this report are in agreement with the books of account.

   (iii) In our opinion to our best of our information and according to the explanation given to us, the said statements give a true and fair view.

   (iv) In the case of the Balance Sheet, of the state of affairs of the **Institution of Agroforestry Farmers and Technologists** as at **31ST March 2025.**

   (v) In our opinion and to the best of our information and according to the explanations given to us, the said financial statements read together with the schedules and notes attached thereto, give the information required by the Provisions of the Act, in the manner so required and give a true and fair view in conformity with the accounting principles generally accepted in India:

G. Murali & Co. Chartered Accountants M.No. 216323



# 412, 4th Floor, "Vanavikas" 18th Cross, Sampige Road, Malleshwram, Bangalore - 560 003, Tel. : 080 2346 3630, Mobile : +91 99729 44144, +91 99729 44244
E-mail : murali@gmuraliandco.com murali.govindaraj@gmail.com Web : www.gmuraliandco.com

**(a)** In the case of Balance Sheet, of the state of affairs of the company as at **31st March 2025.**

(b) In the case of Profit & Loss Account, of the profit for the year ended on that date.

**G Murali & Co.,**
**Chartered Accountants**

G. Murali & Co. * Chartered Accountant * M.No.216323

Proprietor
Membership No: 216323
Firm Registration No: 013149s

Place: Bangalore:
Date: 04/09/2025

**Institution of Agroforestry Farmers & Technologists**
**Vanavikas, Ground Floor, 18 th cross, Malleshwaram Bangalore 560003**
**Receipts&Payments account for the year ended 31.03.2025**

| | Receipts | | | Payments | Amount |
|---|---|---|---|---|---|
| BY | **Opening Balance** | | TO | **Current Assets** | |
| " | Bank Accounts | 4,14,869 | " | Tds Receivable 24-25 | 25,689 |
| " | Cash-in-hand | 173 | | Deposits (Asset) FD's | 27,10,000 |
| | **Capital Account** | | | Indirect Expenses | |
| BY | FARMERS MEMBERSHIP | 36,000 | " | **AGM and board Meeting Expenses** | 26,236 |
| | INSTITUTIONAL MEMBERSHIP | 25,000 | | Audit Fees | 11,800 |
| BY | Life Membership Fee | 1,15,000 | | Bank Charges | 5,958 |
| " | Current Assets | | | **Computer Expenses** | 400 |
| | **TDS RECEIVABLE 2023-24** | 27,330 | " | Domain Renewal & Hosting Charges | 1,100 |
| " | Deposits (Asset) FD's | 24,10,000 | " | Donation Exp | 1,000 |
| " | Indirect Incomes | | " | Election Expenses | 16,200 |
| | **Advertisement Charges (Received)** | 3,21,700 | | E STAMP PAPER | 550 |
| | Donations | 2,01,000 | | Field Visit | 5,450 |
| | Interest on SB Account | 14,671 | | Honorarium | 15,000 |
| | Interest Recived on FD | 2,56,912 | | Legal Charges | 10,000 |
| | Nomination Fees | 13,500 | | Office Expenses | 12,301 |
| | Sales of Book | 1,04,400 | | Postage Expenses | 8,648 |
| | Sold Computer | 661 | | Priniting | 3,29,920 |
| | **Indirect Expenses** | | | Printing and Stationery | 7,260 |
| | Bank Charges | 1 | | Refreshments | 6,535 |
| | Rent & Maintenance | 10,882 | | Reimbursement | 11,421 |
| | | | | Rent & Maintenance | 1,69,073 |
| | | | | Salaries | 2,40,000 |
| | | | | Stationary | 3,946 |
| | | | | Telephone Expenses | 5,226 |
| | | | | Wages | 12,000 |
| | | | | Web Designer Charges | 21,500 |
| | | | " | **Closing Balance** | |
| | | | " | Bank Accounts | 2,90,763 |
| | | | " | Cash-in-hand | 4,123 |
| | Grand Total | **39,52,099** | | Grand Total | **39,52,099** |

Institution of Agroforestry Farmers & Technologists

President Secretary Treasurer

For Institution of Agroforestry Farmers and Technologists

Place: Bangalore
Date: 04/09/2025

G.Murali & Co.
Chartered Accountants

G. Murali & Co. M.No.216323 Chartered Accountant

Murali Govindaraj
Proprietor
Membership No: 216323
Firm Reg no. 013149S

**Institution of Agroforestry Farmers & Technologists**
**Vanavikas, Ground Floor, 18 th cross, Malleshwaram Bangalore 560003**
**Income and expenditure for the year ended 31.3.2025**

| | Expenditure | Rs. | | Income | Rs. |
|---|---|---|---|---|---|
| To | AGM and board Meeting Expenses | 68,436 | By | Advertisement Charges (Received) | 3,21,700 |
| " | Audit Fees | 11,800 | " | Donations | 2,01,000 |
| " | Bank Charges | 5,957 | " | Interest on SB Account | 14,671 |
| " | Computer Expenses | 400 | " | Interest Recived on FD | 2,56,912 |
| " | Coneyance | | " | Nomination Fees | 13,500 |
| " | Depreciation | 12,203 | " | Sales of Book | 1,04,400 |
| " | Domain Renewal & Hosting Charges | 1,100 | " | Sold Computer Supriya | 661 |
| " | Election Expenses | 16,200 | | | |
| " | E STAMP PAPER | 550 | " | **Excess of Expenditure Over Income** | 52,200 |
| " | Field Visit | 5,450 | | | |
| " | Honorarium | 15,000 | | | |
| " | Legal Charges | 10,000 | | | |
| " | Office Expenses | 12,301 | | | |
| " | Postage Expenses | 8,648 | | | |
| " | Priniting | 3,37,180 | | | |
| " | Refreshments | 6,535 | | | |
| " | Reimbursement | 11,421 | | | |
| " | Rent & Maintenance | 1,58,191 | | | |
| " | Salaries | 2,40,000 | | | |
| " | Stationary | 3,946 | | | |
| " | Telephone Expenses | 5,226 | | | |
| " | Wages | 12,000 | | | |
| " | Web Designer Charges | 21,500 | | | |
| " | Donation Exp | 1,000 | | | |
| | **Grand Total** | **9,65,044** | | **Grand Total** | **9,65,044** |

For Institution of Agroforestry Farmers & Technologists

President Secretary Treasurer

For Institution of Agroforestry Farmers and Technologists

Place: Bangalore
Date: 04/09/2025

G.Murali & Co.
Chartered Accountants

G. Murali & Co., M.No.216323, Chartered Accountant

Murali Govindaraj
Proprietor
Membership No: 216323
Firm Reg no. 013149S

**Institution of Agroforestry Farmers & Technologists**
**Vanavikas, Ground Floor, 18 th cross, Malleshwaram Bangalore 560003**
**Balance sheet as of 31.3.2025**

| Liabilities | Amount | Amount | Assets | Amount | Amount |
|---|---|---|---|---|---|
| **Capital account (Sch-1)** | 49,50,717 | | **Fixed Assets** | 64,043 | |
| Less : Excess of Expenditure Over Income | 52,200 | | less:Depreciation | 12,203 | |
| | | 48,98,517 | **Net fixed assets** | | **51,840** |
| | | | **Deposits** | | |
| | | | Fixed Deposit (Sch-3) | 44,10,000 | |
| | | | Telephone Deposit | 500 | |
| | | | Water Deposit | 125 | **44,10,625** |
| | | | **Cash and Bank balance** | | |
| | | | Canara bank | | **2,90,763** |
| | | | Cash in Hand | | **4,123** |
| | | | TDS RECEIVABLE | | **14,352** |
| | | | Accrued Interest | | **1,26,814** |
| **Grand Total** | | **48,98,517** | **Grand Total** | | **48,98,517** |

**For Institution of Agroforestry Farmers & Technologists**

President Secretary Treasurer

For Institution of Agroforestry Farmers and Technologists

Place: Bangalore
Date: 04/09/205

G.Murali & Co.
Chartered Accountants

G. Murali & Co. * M.No.216323 * Chartered Accountant

Murali Govindaraj
Proprietor
Membership No: 216323
Firm Reg no. 013149S

| Capital | Amount |
| --- | --- |
| Agro Forestry Farmers Association | 42,80,117.00 |
| Add :Associate Membership | 4,000.00 |
| Add :Donations in Kind | 72,200.00 |
| Add :FARMERS MEMBERSHIP | 42,000.00 |
| Add :INSTITUTIONAL MEMBERSHIP | 1,00,000.00 |
| Add :Life Membership Fee | 1,75,000.00 |
| Add :Membership Fee | 2,77,300.00 |
| Add :Nominal Member | 100.00 |
| **TOTAL** | **49,50,717.00** |

For INSTITUTION OF AGROFORESTRY FARMERS AND TECHNOLOGISTS (R)
PRESIDENT

For INSTITUTION OF AGROFORESTRY FARMERS AND TECHNOLOGISTS (R)
SECRETARY

For INSTITUTION OF AGROFORESTRY FARMERS AND TECHNOLOGISTS (R)
TREASURER

G. Murali & Co., Chartered Accountant M.No. 16323

## Institution of Agroforestry Farmers & Technologists

Vanavikas, Ground Floor, 18 th cross, Malleshwaram Bangalore 560003

Depreciation Schedule 2024-25

| Assets | As on 01/04/2024 | Additions Before Sep 2024 | Additions After Sep 2024 | Deletions | Total | Rate of Depreciation | Depreciation | Closing Balance 31.3.2025 |
|---|---|---|---|---|---|---|---|---|
| Furniture & Fixtures | 41,376 | - | - | - | 41,376 | 10% | 4,138 | 37,238 |
| Office Equipments | 1,031 | - | - | - | 1,031 | 15% | 155 | 876 |
| Office name board | 2,975 | - | - | - | 2,975 | 15% | 446 | 2,529 |
| Computers | 18,661 | - | - | - | 18,661 | 40% | 7,464 | 11,197 |
| **Total** | **64,043** | - | - | - | **64,043** | | **12,203** | **51,840** |

1-20-1

For INSTITUTION OF AGROFORESTRY FARMERS AND TECHNOLOGISTS (R)
PRESIDENT

For INSTITUTION OF AGROFORESTRY FARMERS AND TECHNOLOGISTS (R)
SECRETARY

For INSTITUTION OF AGROFORESTRY FARMERS AND TECHNOLOGISTS (R)
TREASURER

G. Murali & Co., Chartered Accountant, M.No.216323

# Institute of Agro Forestry Farmers and Technologists

## STATEMENT SHOWING THE DETAILS OF AMOUNT INVESTED IN FIXED DEPOSITS as on 31-03-2025

| Sl.No. | BANK | FD Receipt No. | Date of investment | Re-invested amount | Period | | Closing Balance 31.03.2025 |
|---|---|---|---|---|---|---|---|
| | | | | | From | Maturity date | |
| 1 | Canara Bank | 130030869366/1 | 28/12/2023 | 6,00,000 | 28/12/2023 | 16/03/2025 | 6,00,000 |
| 2 | Canara Bank | 130030869366/2 | 28/12/2023 | 6,00,000 | 28/12/2023 | 16/03/2025 | 6,00,000 |
| 3 | Canara Bank | 130030869366/3 | 04/01/2024 | 5,00,000 | 04/01/2024 | 23/03/2025 | 5,00,000 |
| 4 | Canara Bank | 130048751087/1 | 19/04/2024 | 12,00,000 | 19/04/2024 | 08/03/2026 | 12,00,000 |
| 5 | Canara Bank | 130048752576/1 | 19/04/2024 | 2,00,000 | 19/04/2024 | 08/03/2026 | 2,00,000 |
| 6 | Canara Bank | 140156192717/1 | 20/06/2025 | 2,10,000 | 20/06/2025 | 07/09/2025 | 2,10,000 |
| 7 | Canara Bank | 140156192717/2 | 31/08/2025 | 5,00,000 | 31/08/2025 | 18/11/2025 | 5,00,000 |
| 8 | Canara Bank | 140175947185/1 | 03/09/2024 | 5,00,000 | 03/09/2024 | 21/11/2025 | 5,00,000 |
| 9 | Canara Bank | 140182961689/1 | 26/07/2024 | 1,00,000 | 26/07/2024 | 14/12/2025 | 1,00,000 |
| | - | **TOTAL** | | **44,10,000** | | | **44,10,000** |

- 72 -

For INSTITUTION OF AGROFORESTRY FARMERS AND TECHNOLOGISTS (R)
PRESIDENT

For INSTITUTION OF AGROFORESTRY FARMERS AND TECHNOLOGISTS (R)
SECRETARY

For INSTITUTION OF AGROFORESTRY FARMERS AND TECHNOLOGISTS (R)
TREASURER

G. Murali & Co., Chartered Accountant, M.No. 216323

# ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ

ವನವಿಕಾಸ, ನೆಲಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

## 2026–27ನೇ ಸಾಲಿಗೆ ಪ್ರಸ್ತಾಪಿತ ಆಯವ್ಯಯ ತಃಖ್ತೆ

| ಜಮಾ | | | ಖರ್ಚು | | |
|---|---|---|---|---|---|
| ಕ್ರ.ಸಂ. | ವಿವರಗಳು | ಮೊತ್ತ | ಕ್ರ.ಸಂ. | ವಿವರಗಳು | ಮೊತ್ತ |
| 1 | ಸದಸ್ಯತ್ವ ಶುಲ್ಕ | 2,00,000.00 | 1 | ಕಛೇರಿ ವೆಚ್ಚ | 25,000.00 |
| 2 | ದೇಣಿಗೆ ಆದಾಯ | 2,00,000.00 | 2 | ದೂರವಾಣಿ ವೆಚ್ಚ | 10,000.00 |
| 3 | ಎಫ್.ಡಿ. ಖಾತೆಯ ಮೇಲಿನ ಬಡ್ಡಿ | 3,00,000.00 | 3 | ಕಛೇರಿ ಸಹಾಯಕರ ಸಂಬಳ | 2,80,000.00 |
| 4 | ಜಾಹೀರಾತು ಇತರೆ ಮೂಲಗಳ ಆದಾಯ | 3,00,000.00 | 4 | ಕೆ.ಎಫ್.ಡಿ.ಸಿ. ಬಾಡಿಗೆ, ನಿರ್ವಹಣೆ, ನೀರು ಸರಬರಾಜು, ವಿದ್ಯುಚ್ಛಕ್ತಿ ವೆಚ್ಚ | 2,00,000.00 |
| 5 | | | 5 | ಸಭೆಗಳ ವೆಚ್ಚ | 75,000.00 |
| 6 | | | 6 | ಆಡಿಟ್ ವೆಚ್ಚ | 15,000.00 |
| 7 | | | 7 | ಪ್ರವಾಸ ವೆಚ್ಚ | 75,000.00 |
| 8 | | | 8 | ಚಟುವಟಿಕೆಗಳ ವೆಚ್ಚ ಕ್ಷೇತ್ರ ಭೇಟಿ, ಕಾರ್ಯಾಗಾರ ಇತರೆ | 1,50,000.00 |
| 9 | | | 9 | ಅಂಚೆ ವೆಚ್ಚ | 10,000.00 |
| 10 | | | 10 | ಮುದ್ರಣ ಮತ್ತು ಪ್ರಕಟಣೆ | 75,000.00 |
| 11 | | | 11 | ಕಂಪ್ಯೂಟರಿನ ನಿರ್ವಹಣೆ | 5,000.00 |
| 12 | | | 12 | ಪ್ರಶಸ್ತಿಗಳ ವೆಚ್ಚ | 50,000.00 |
| 13 | | | 13 | ಇತರೆ ವೆಚ್ಚ | 30,000.00 |
| 14 | **ಒಟ್ಟು ಮೊತ್ತ** | 10,00,000.00 | 14 | **ಒಟ್ಟು ಮೊತ್ತ** | **10,00,000.00** |

ಸಹಿ/–
(ಡಾ. ಎಸ್. ರಮೇಶ್)
ಕಾರ್ಯದರ್ಶಿಗಳು

ಸಹಿ/–
(ಎ. ಅಶ್ವಥಯ್ಯ)
ಖಜಾಂಚಿ